ರಾಮ

ಶ್ರೀವೈಷ್ಣವ [illegible]

ಲೇಖಕರು :

ಹೆಚ್. ಜಿ. ರಾಮಯ್ಯಂಗಾರ್

ಸಹಾಯಕ ಶಿಕ್ಷಣಾಧಿಕಾರಿ

ವಿಭಾಗ I, ನಗರ ದಕ್ಷಿಣಜಿಲ್ಲೆ

ಬೆಂಗಳೂರು-560004.

ಪ್ರಕಾಶಕರು :

ಶ್ರೀರಾಮ ಪ್ರೆಸ್

ಬೆಂಗಳೂರು-4.

ರಾಮ

Shree Vaishnava Matha Deepike – a book on Vishishtadvaita or Shree Vaishnavism by Shri H. J. Ramaiengar.

Published by Sri Rama Press, Bangalore-560004.

First Published in 1975 pages-vi + 88

Price – Rs. 2-50

ಈ ಲೇಖಕರ ಇತರ ಗ್ರಂಥಗಳು :

ವಿಶ್ವದರ್ಶನ
ಕ್ರಿಯಾತ್ಮಕ ಶಿಕ್ಷಣ
ಕರ್ನಾಟಕ ದರ್ಶನ
ಭಾರತೀಯ ಸ್ವಾತಂತ್ರ್ಯ ಚಳುವಳಿ
ಸಮಾಜ ಜ್ಞಾನ ಕೋಶ
ನಮ್ಮ ನಾಡು ಭಾರತ
ಸಾರ್ವತ್ರಿಕ ಪ್ರಾರ್ಥನೆ
ಸ್ವರಾಜ್ಯ ಸಂದರ್ಶನ
ಶಿಕ್ಷಣ ಪ್ರದೀಪ
ಸಮಾಜ ಕಲ್ಯಾಣ ಚಳುವಳಿ
ಲೋಕ ಧರ್ಮ ದರ್ಶನ
ಬಾಲಾಪರಾಧಿಯ ಸಮಸ್ಯೆ

Printed at Sri Rama Press, Ranga Rao Road,
Shankarapuram, Bangalore.4.

ಅರಿಕೆ

ಸುತ್ತಲಿನ ಸೃಷ್ಟಿ ಮತ್ತು ಜೀವನ ಎರಡರ ಮೂಲಸ್ವರೂಪವನ್ನೂ ಹಾಗೂ ಅವುಗಳಿಗಿರುವ ಪರಸ್ಪರ ಸಂಬಂಧದ ರಹಸ್ಯವನ್ನೂ ತಿಳಿಸುವುದೇ ಧರ್ಮ. ಎಲ್ಲ ಧರ್ಮದ ದೇವ-ದೇವತೆಗಳು, ಪೂಜಾಪದ್ಧತಿಗಳು, ತೀರ್ಥ ಕ್ಷೇತ್ರಗಳು, ಬೇರೆ ಬೇರೆಯಾಗಿದ್ದರೂ ಸಹ ಧರ್ಮಗಳೆಲ್ಲದರ ನೀತಿ-ನಿಬಂಧಗಳು, ಮಾನವರು ಪರಸ್ಪರ ನಡೆದುಕೊಳ್ಳತಕ್ಕ ನೀತಿ-ನಿಯಮಗಳು, ವಿಧಿ-ನಿಷೇಧಗಳು ಸಾಮಾನ್ಯವಾಗಿ ಒಂದೇ ಆಗಿರುತ್ತವೆ. ಬಗೆ ಬಗೆಯ ಸ್ವಭಾವದ ಜನರಿಗೆ ಹಿಡಿಸುವಂತಹ, ಬಗೆಬಗೆಯ ವಿಚಾರ ವಿವೇಚನೆಗಳಿಂದ, ವಿವಿಧ ಹಂತಗಳಲ್ಲಿ ಇರುವ ವಿವಿಧ ಮಾನವರಿಗೆ ಮಾರ್ಗದರ್ಶಕ, ಸಹಾಯ ಆಗುವ ವಿವಿಧ ರೀತಿಯ ಧರ್ಮ-ಮತ-ಪಂಥಗಳೆಲ್ಲವೂ ದೈವೀಪುರುಷರ ಹಾಗೂ ಮಹಾನುಭಾವರ ಚಿಂತನೆಯ ಫಲವಾಗಿ ರೂಪುಗೊಂಡಿವೆ ಎಂದರೆ ತಪ್ಪಾಗಲಾರದು.

ಈ ಪ್ರಪಂಚದಲ್ಲಿ ಶಕ್ತಿ ಸ್ವಾಸ್ಥ್ಯ-ಧನಸಂಪತ್ತನ್ನು ಗಳಿಸುವುದು, ಸುಖ ಸಂತೋಷಗಳನ್ನು ಅನುಭವಿಸುವುದು, ಕೊನೆಯಲ್ಲಿ ಮುಕ್ತನಾಗಿ ಶ್ರಮಿಸುವುದು—ಇವೆಲ್ಲವೂ ಧರ್ಮದ ಆಚರಣೆಯಿಂದ ಆಗಬೇಕೆನ್ನುವುದೇ ಎಲ್ಲ ಧರ್ಮಗಳ ಸಾರ. ಇದು ಸಾಧ್ಯವಾಗಲು ಅಂದರೆ ಮಾನವರೆಲ್ಲರಲ್ಲಿಯೂ ಸದ್ಬುದ್ಧಿ ಉಂಟಾಗಲು, ಸದಾಚಾರಕ್ಕೆ ಪ್ರೋತ್ಸಾಹ ದೊರಕಲು, ಸತ್ಕಾರ್ಯ ಪ್ರವೃತ್ತಿಯು ಹೆಚ್ಚಲು, ಐಕ್ಯತೆ, ಭ್ರಾತೃತ್ವ, ಪ್ರೀತಿ, ಸಹಕಾರ, ಸಮಾನತೆ, ಕರ್ತವ್ಯ ಪ್ರಿಯತೆ ಮೊದಲಾದ ಸದ್ಗುಣಗಳು ಬೇರೂರಿ ಬೆಳೆಯಲು, ಧಾರ್ಮಿಕ ಮತ್ತು ನೀತಿ ಶಿಕ್ಷಣ ಅಗತ್ಯ. ಮುಖ್ಯವಾಗಿ ಅಸೌಖ್ಯಕ್ಕೆ ಕಾರಣವಾದ ವಿಲಾಸ ವ್ಯಸನ, ವೈಪ್ರೋಟಿ, ಬೇಸರ, ಬಾಲಿಕೆ, ಹೊಟ್ಟೆಕಿಚ್ಚು, ಪಾಪಪಂಕ, ಶತ್ರುಕಾಟದ ಭ್ರಾಂತಿ, ಜನಾಭಿಪ್ರಾಯದ ಭಯ -ಇವುಗಳೆಲ್ಲವನ್ನೂ ತ್ಯಜಿಸಿ, ಸೌಖ್ಯಕ್ಕೆ ಕಾರಣವಾದ ಆಸ್ಥೆ, ಪ್ರೀತಿ, ಕುಟುಂಬಪ್ರೇಮ, ಒಪ್ಪಿದ ಕೆಲಸ ನಿಸ್ವಾರ್ಥ ಹವ್ಯಾಸ, ಸಾಧನೆಗಾಗಿ ಸ್ಥೈರ್ಯ, ಪರರ ಬಗ್ಗೆ ಒಲವು, ಬಾಹ್ಯವಸ್ತುಗಳಲ್ಲಿ ಅಸಕ್ತಿ-ಇವುಗಳನ್ನು ಹೊಂದಬೇಕು.

ತನ್ನ ಧರ್ಮವನ್ನು ಸಂಪೂರ್ಣವಾಗಿ ತಿಳಿದುಕೊಂಡು ಆಚರಿಸುವವನು ಬೇರೆಯವರ ಧರ್ಮವನ್ನು ಅರ್ಥಮಾಡಿಕೊಳ್ಳಬಲ್ಲ, ಆಚರಿಸಲಾರ.

[illegible]ತಿಪ್ಪನ್ನಿ [illegible] ಅತಗಿರುವ ತತ್ತ್ವ, ಹಿತ, ಪುರುಷಾರ್ಥಗಳ ಸುಧಾರಿತ [illegible] ಶ್ರೀವೈಷ್ಣವರಿಗೆಲ್ಲ ಅತ್ಯವಶ್ಯವಾಗಿದೆ.

[illegible] ಸಂಸ್ಕೃತ ಭಾಷೆಯಲ್ಲಿರುವ ವೇದದಿಂದ [illegible] ಉಪನಿಷತ್ತುಗಳಲ್ಲಿ [illegible] ಪ್ರತಿಪಾದಿತ [illegible] ಆಚಾರ್ಯರುಗಳಿಂದ [illegible] ಸಮರ್ಥಿಸಲ್ಪಟ್ಟು, [illegible] ಶ್ರೀವೈಷ್ಣವ [illegible] ದ್ರಾವಿಡ ಭಾಷೆಯ [illegible] ಪ್ರಬಂಧ [illegible]

[illegible] ನ ಬ್ರಹ್ಮಾ [illegible] |
[illegible] ನಾರಾಯಣಾನ್ನ [illegible] ಜಾಯತೇ ||"

[illegible] ಸಮಸ್ತ ಪರಿಪೂರ್ಣಗುಣಗಳನ್ನು ಹೊಂದಿ [illegible] ಆತ್ಮಗಳೆಲ್ಲವನ್ನೂ ತನ್ನ ಶರೀರವಾಗಿ ಉಳ್ಳ [illegible] ಆ ದೇವರಿಯಲ್ಲಿ ಸಂಪೂರ್ಣ ಶರಣಾ[illegible] ಪ್ರಪತ್ತಿ [illegible] ಆ ದೇವರನ್ನು ಅಚಲ ಭಕ್ತಿಯಿಂದ [illegible] ಪುರಾಣಗಳು, ಆಗಮಗಳು [illegible] ಪ್ರಬಂಧಗಳಿಗೆ [illegible] ಶ್ರೀವೈಷ್ಣವವನ್ನು ನೀಡ[illegible] ನಾಥಮುನಿ ಮತ್ತು ಯಾಮುನಾಚಾರ್ಯರ [illegible] ಪ್ರಚಾರಮಾಡಿದವರು ರಾಮಾನುಜಾಚಾರ್ಯರು. ಆಚಾರ್ಯರ [illegible] ಇದರಲ್ಲಿ ಬಹುಮುಖ್ಯವಾದುದು.

ಶ್ರೀವೈಷ್ಣವಗುರುಪರಂಪರೆ ಹೀಗಿದೆ :-

ಶ್ರೀಮನ್ನಾರಾಯಣ - ಶ್ರೀಮಹಾಲಕ್ಷ್ಮಿ – ವಿಷ್ವಕ್ಸೇನ – ನಮ್ಮಾಳ್ವಾರ್ (ಶಠಗೋಪ)-ನಾಥಮುನಿ–ಉಯ್ಯಕ್ಕೊಂಡಾರ್ (ಪುಂಡರೀಕಾಕ್ಷ)–ಮಣಕ್ಕಾಲ್ ನಂಬಿ (ರಾಮಮಿಶ್ರ)–ಆಳವಂದಾರ್ (ಯಾಮುನಾಚಾರ್ಯ)–ಪೆರಿಯ ನಂಬಿ (ಮಹಾಪೂರ್ಣ)–ರಾಮಾನುಜ.

ರಾಮಾನುಜರನ್ನೇ ಅನುಸರಿಸುವ ತೆಂಗಲೈ–ವಡಗಲೈ ಸಂಪ್ರದಾಯದ ಗುರು ಪರಂಪರೆ ಹೀಗಿದೆ :–

1) ರಾಮಾನುಜ–ತಿರುಕ್ಕುರುಕೈಪ್ಪಿರಾನ್ ಪಿಳ್ಳಾನ್ – ಎಂಗಳಾಳ್ವಾನ್ (ವಿಷ್ಣುಚಿತ್ತ) – ನಡಾದೂರಮ್ಮಾಳ್ (ವಾತ್ಸ್ಯವರದಾಚಾರ್ಯ) – ಆತ್ರೇಯ ರಾಮಾನುಜ – ತೂಪ್ಪುಲ್ ಪಿಳ್ಳೈ (ವೇದಾಂತದೇಶಿಕ)–ವಡಗಲೈ ಸಂಪ್ರದಾಯಕ್ಕೆ ಮುಖ್ಯರು.

ರಾಮಾನುಜರ 'ಶ್ರೀಭಾಷ್ಯ' ಕಾಲಕ್ಷೇಪದಲ್ಲಿ ವಾತ್ಸ್ಯವರದಾಚಾರ್ಯರು ಹೇಳಿದ ಅರ್ಥವಿಶೇಷವನ್ನು ಸುದರ್ಶನಾಚಾರ್ಯರು ಬರೆದ "ಶ್ರುತ ಪ್ರಕಾಶಿಕೆ" ಎಂಬ ವಿವರಣ ಗ್ರಂಥಕ್ಕೆ ವೇದಾಂತ ದೇಶಿಕರು ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ.

2) ರಾಮಾನುಜ [illegible]ಪ್ಪರ್–ಎಂಬಾರ್ (ಗೋವಿಂದಭಟ್ಟರ್) ಪರಾಶರಭಟ್ಟರ್ ನಂಜೀಯರ್–ನಂಪಿಳ್ಳೈ (ನಂಬೂರ್ ವರದರಾಜಾಚಾರ್ಯ) ಪೆರಿಯವಾಚ್ಚಾನ್ ಪಿಳ್ಳೈ–ವಡಕ್ಕುತ್ತಿರುವೀದಿಪಿಳ್ಳೈ–ಪಿಳ್ಳೈಲೋಕಾಚಾರ್ಯ–ತಿರುವಾಯ್ಮೊಳಿಪಿಳ್ಳೈ (ಶ್ರೀಶೈಲೇಶರ್)–ಮಣವಾಳಮಾಮುನಿ (ಅಳಗಿಯ ಮಣವಾಳಜೀಯರ್)–ತೆಂಗಲೈ ಸಂಪ್ರದಾಯಕ್ಕೆ ಮುಖ್ಯರು: ತಿರುವಾಯ್ಮೊಳಿಯ ಕಾಲಕ್ಷೇಪದಲ್ಲಿ ನಂಪಿಳ್ಳೈಯವರು ಹೇಳಿದ ಅರ್ಥವಿಶೇಷವನ್ನು ಸಂಗ್ರಹಿಸಿ ವಡಕ್ಕುತ್ತಿರುವೀದಿಪಿಳ್ಳೈಯವರು ಬರೆದ "ಮುಪ್ಪತ್ತಾರಾಯಿರಪ್ಪಡಿ" ಎಂಬ ವ್ಯಾಖ್ಯಾನ ಗ್ರಂಥಕ್ಕೆ ಮಣವಾಳಮಾಮುನಿಗಳು ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆ.

ರಾಮಾನುಜ ಸಿದ್ಧಾಂತದ ಸಾರವನ್ನು ಹೀಗೆ ಸಂಗ್ರಹವಾಗಿ ಹೇಳಬಹುದು :–

"ಶ್ರೀಮಲ್ಲಕ್ಷ್ಮಣಯೋಗಿನಸ್ತ್ರಿಭುವನಂ ಸತ್ಯಂತದೀಶಃ ಶ್ರಿಯಃ
ಕಾಂತೋ ಬ್ರಹ್ಮ ಸ ಏವ ಸೋಽಖಿಲತನುಃ ಭಿನ್ನಾಸ್ತತಶ್ಚೇತನಾಃ ।
ಸತ್ಯಾ ಸಂಸೃತಿರೀಶನಿಗ್ರಹಕೃತಾ ಮುಕ್ತಿಸ್ತು ಭಕ್ತ್ಯಾದಿನಾ
ತತ್ಪ್ರಾಪ್ತಿಃ ಪರಮೇ ಪದೇ ತದನುಭೂತ್ಯಾಖ್ಯೇತಿ ಸಂಚಕ್ಷತೇ ॥"

ರಾಮಾನುಜ ದರ್ಶನವು ಮುಖ್ಯವಾಗಿ ಭಕ್ತಿಪಂಥವಾಗಿದ್ದು ಇದರಲ್ಲಿ ಅಪಾರವಾಗಿ ಉತ್ಕೃಷ್ಟವಾದ ಸ್ತೋತ್ರ ಸಾಹಿತ್ಯ ಬೆಳೆದು ಬಂದಿದೆ. ಕುಲಶೇಖರ,

ಯಾಮುನ, ರಾಮಾನುಜ, ಕೂರನಾಥ, ಪರಾಶರಭಟ್ಟ, ವೇದಾಂತ ದೇಶಿಕ, ಮುಂತಾದವರು ಈ ದರ್ಶನ ಸಾರಸರ್ವಸ್ವವನ್ನು ಈ ಸ್ತೋತ್ರಗಳಲ್ಲಿ ಭಟ್ಟಿ ಇಳಿಸಿದ್ದಾರೆ.

ಕಲಿಯುಗದಲ್ಲಿ ಪ್ರಾರ್ಥನೆಗೆ ಹೆಚ್ಚು ಮಹತ್ವವಿದೆ. ಪರಿಮಿತವಾದ ಪುರುಷ ಶಕ್ತಿಯು ಕುಗ್ಗಿದಾಗ, ಮಾನವಸಾಮರ್ಥ್ಯದಿಂದ ಶ್ರೇಯಸಾಧನೆ ಆಗದಿದ್ದಾಗ, ಜಗತ್ತಿನ ಮೂಲಕಾರಣವೂ, ಅತೀತವೂ, ಅತೀಂದ್ರಿಯವೂ, ಅವ್ಯಕ್ತವೂ ಆದ ದೈವ ಅಥವಾ ಪರಾಶಕ್ತಿಯ ಪೂಜಾ ಜಪಧ್ಯಾನಗಳನ್ನು ಮಾಡಿ ಅದಕ್ಕೆ ಶರಣು ಹೋಗುವುದೇ ಭಕ್ತರ ಕಾರ್ಯಸಿದ್ಧಿಗೆ ಪರಮೋಪಾಯ.

"ನ ತೇ ರೂಪಂ ನ ಚಾಕಾರೋ ನಾಯುಧಾನಿ ನ ಚಾಸ್ಪದಂ । ತಥಾಪಿ ಪುರುಷಾಕಾರೋ ಭಕ್ತಾನಾಂ ತ್ವಂ ಪ್ರಕಾಶಸೇ ॥" ಎಂಬಂತೆ ಪರಾಶಕ್ತಿಯು ನಿರ್ಗುಣ, ನಿರುಪಾಧಿಕ, ನಿರಾಕಾರ ಆಗಿದ್ದರೂ ಅದಕ್ಕೆ ಸಗುಣ, ಸೋಪಾಧಿಕ, ಸಾಕಾರಸ್ವರೂಪವೂ ಇದ್ದು ಅದಕ್ಕೆ ಕಾಲ ದೇಶ ಪಾತ್ರ ಸನ್ನಿವೇಶಗಳಿಗೆ ಅನುಗುಣವಾದ ನಾನಾರೂಪಗಳಿಂದ ಮೂರ್ತೀಭವಿಸುವ ಶಕ್ತಿಯುಂಟು. ನಿಷ್ಕಲ ಭಕ್ತಿಯಿಂದ ಅದರ ನಾಮಸ್ಮರಣೆ ಮಾಡುವುದೇ ಅದರ ಅನುಗ್ರಹವನು ಗಳಿಸಿ, ಸಿದ್ಧಿಯನ್ನು ಪಡೆಯಲು ಇರುವ ಅತ್ಯುತ್ತಮ, ಅತಿ ಸುಲಭ, ಫಲಪ್ರದ ಉಪಾಯ.

ಶ್ರೀರಾಮಾನುಜ ಮೊದಲಾದ ಆಚಾರ್ಯರ ತತ್ತ್ವ ಚಿಂತನೆ, ಆ ಚೈತನ್ಯದಿಂದ ಪ್ರೇರಿತರಾಗಿ ರೂಪುಗೊಂಡ ಆಚಾರಸರಣಿ ಅದರ ಪರಿಣಾಮವಾಗಿ ಉಂಟಾದ ಜೀವನ ಪದ್ಧತಿ-ಇವು ಈಗ ಬೇಕಾಗಿದೆ. ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿರುವ ಶ್ರೀವೈಷ್ಣವ ಮತದ ಹಾಗೂ ಇದನ್ನು ಗೌರವಿಸಿ ಅನುಷ್ಠಾನ ಮಾಡಿ, ಪ್ರಚಾರಮಾಡಿದ ಮುಖ್ಯ ಆಚಾರ್ಯರ ಪರಿಚಯವನ್ನು ಈ ಪುಸ್ತಕದ ಮೂಲಕ ಸರಳ ಶೈಲಿಯಲ್ಲಿ ಮಾಡಿಕೊಡುವ ಯತ್ನ ನಡೆದಿದೆ. ಭಕ್ತಿ ಸಂಪನ್ನರಾದ ಇವರಲ್ಲಿ ಸಹಜವಾಗಿ ಬೆಳೆದು ಬಂದಿರುವ ಉತ್ಕೃಷ್ಟವಾದ ಸ್ತೋತ್ರಗಳನ್ನೂ, ಅವುಗಳಿಗೆ ಕಾರಣರಾದ ವಿವಿಧ ಅರ್ಚಾಮೂರ್ತಿಗಳಿರುವ ಕ್ಷೇತ್ರಗಳನ್ನೂ ಸೇರಿಸಲಾಗಿದೆ. ಆದರೂ ಇದು ಸಂಕ್ಷೇಪ, ಸೂಚಕ, ಪ್ರೇರೇಪಕ ಗ್ರಂಥವೇ ಹೊರತು ಪರಿಪೂರ್ಣ, ವಿಸ್ತಾರ, ವಿವರಣ ಗ್ರಂಥವಲ್ಲ.

ಹೆಚ್ಚಿನ ವಿವರ ಬೇಕಾದವರು ಕೊನೆಯಲ್ಲಿ ಕೊಟ್ಟಿರುವ ಆಧಾರ ಗ್ರಂಥಗಳನ್ನು ಅಧ್ಯಯನ ಮಾಡಬಹುದು.

ಆಚಾರ್ಯರುಗಳಿಂದ ರಚಿಸಲ್ಪಟ್ಟ ಗ್ರಂಥಗಳ ಹಾಗೂ ಸ್ತೋತ್ರಗಳ ವ್ಯಾಸಂಗ ಮತ್ತು ಪ್ರಚಾರ, ಪವಿತ್ರ ತೀರ್ಥಕ್ಷೇತ್ರಗಳಿಗೆ ಯಾತ್ರೆ ಹೋಗಿ ಅಲ್ಲಿ ಭಗವಂತನಿಗೆ ನಿವೇದನ, ದೀಪ ಮತ್ತು ಪೂಜೆಗಳ ಸಮರ್ಪಣ, ಮಂತ್ರರತ್ನಗಳ ಜಪ, ನಿತ್ಯಕರ್ಮಗಳ ಅನುಷ್ಠಾನ, ಭಗವದ್ದ್ವೇಷಿಗಳಿಂದ ದೂರವಿದ್ದು ಭಗವದ್ಭಕ್ತರ ಸಂಗದಲ್ಲಿರುವುದು-ಇವು ಶ್ರೀವೈಷ್ಣವರೆನಿಸಿಕೊಂಡವರು ಈಗ ಮಾಡಬೇಕಾದ ಆತ್ಯಕರ್ತವ್ಯ ಹಾಗೂ ಮುಂದಿನ ಪೀಳಿಗೆಯ ಮಕ್ಕಳಿಗೆ ಬಿಟ್ಟು ಹೋಗಬೇಕಾದ ಆಸ್ತಿ.

ಬಾಲ್ಯದಿಂದಲೂ ವೇದಾಧ್ಯಯನ, ಸಂಸ್ಕೃತದ ಅಭ್ಯಾಸ, ಸಂಗೀತ ಪಾಠ ದಿವ್ಯ ಪ್ರಬಂಧದ ಕಲಿಕೆ, ನಿತ್ಯಕರ್ಮದಲ್ಲಿ ತರಬೇತಿ, ಶಾಲಾಶಿಕ್ಷಣ, ಇವೆಲ್ಲಕ್ಕೂ ಅವಕಾಶ, ಅನುಕೂಲಗಳನ್ನು ಯಥಾಯೋಗ್ಯವಾಗಿ ಕಲ್ಪಿಸಿಕೊಟ್ಟು, ಇಂತಹ ಪುಸ್ತಕಗಳನ್ನು ಬರೆಯಲು ಶಕ್ತನನ್ನಾಗಿ ಮಾಡಿದವರು ನನ್ನ ತೀರ್ಥರೂಪರವರಾದ ಶ್ರೀ ಹೆಚ್. ಆರ್. ಜನಾರ್ದನಯ್ಯಂಗಾರ್; ತಮ್ಮ ಪ್ರವಚನಗಳ ಮೂಲಕ ವಿಶಿಷ್ಟಾದ್ವೈತಸಿದ್ಧಾಂತದ ಹಾಗೂ ಆಚಾರ್ಯರುಗಳ ಉಪದೇಶದಸಾರವನ್ನು ತಿಳಿಸಿಕೊಳ್ಳಲು ನೆರವಾದವರು ಶ್ರೀಮದಭಿನವ ಬ್ರಹ್ಮತಂತ್ರಸ್ವತಂತ್ರಪರಕಾಲಮಠದ ಸ್ವಾಮಿಗಳು ಹಾಗೂ ಶ್ರೀರಂಗದ ಶ್ರೀಮದ್ ಆಂಡವನ್‌ಸ್ವಾಮಿಗಳು; ಶ್ರೀವೈಷ್ಣವ ಪಂಥ ಹಾಗೂ ಸನಾತನ ಧರ್ಮಗಳ ಬಗ್ಗೆ ಶಿಕ್ಷಣ ಪಡೆಯಲು ಹಾಗೂ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಪುರಸ್ಕಾರ ಪಡೆಯಲು ಅವಕಾಶ ನೀಡಿದವರು ಬೆಂಗಳೂರಿನ ಉಭಯ ವೇದಾಂತ ಪ್ರವರ್ತನ ಸಭೆ ಮತ್ತು ತಿರುಪತಿಯ ಶ್ರೀವೇಂಕಟೇಶ್ವರ ಪ್ರಾಚ್ಯ ಸಂಶೋಧನ ಸಂಸ್ಥೆ; ಆಧಾರ ಗ್ರಂಥಗಳ ವ್ಯಾಸಂಗ ಮತ್ತು ಕೃತಿರಚನೆಗಳಿಗೆಲ್ಲ ಸಾಕಷ್ಟು ಆರ್ಥಿಕ ನೆರವು ಸಿಗಲು ಕಾರಣವಾಗಿರುವವಳು ನನ್ನ ಧರ್ಮಪತ್ನಿ ಶ್ರೀಮತಿ ಎಂ. ವಿ. ಅಂಬುಜಮ್ಮ, ಬಿ. ಎಸ್‌ಸಿ., ಬಿ.ಇಡಿ.; ರಾಮಾನುಜ ಸಪ್ತಾಹದಲ್ಲಿ ಉಪನ್ಯಾಸ ಮಾಡಬೇಕೆಂದು ಕೇಳಿ ಆ ಮೂಲಕ ಇಂಥಹೊಂದು ಪುಸ್ತಕವನ್ನು ರಚಿಸಲು ಪ್ರೇರಣೆ ಇತ್ತವರು ಶ್ರೀ ಹೆಚ್. ಎಸ್. ನರಸಿಂಹಮೂರ್ತಿ,

ಬಿ. ಎಸ್ ಶ್ರೀನಿವಾಸನ್, ಬಿ. ಇ; ಇವನ್ನು ಬರೆಯುವಾಗ ಕೆಲವು ಉತ್ತಮ ಸಲಹೆಗಳನ್ನು ನೀಡಿದವರು ಪ್ರಾಧ್ಯಾಪಕ ಶ್ರೀ ಎಚ್. ಜಿ. ರಂಗಸ್ವಾಮಿಯ್ಯಂಗಾರ್, ಎಂ. ಎ. ಹಾಗೂ ಪಂಡಿತರಾಜ ಇತ್ಯಾದಿ ಬಿರುದಾಂಕಿತರಾದ ವಿದ್ವಾನ್ ಶ್ರೀ ಎಸ್. ಟಿ ಶ್ರೀನಿವಾಸಯ್ಯಂಗಾರ್; ಇಂಥದೊಂದು ಪುಸ್ತಕವನ್ನು ಬರೆಯುತ್ತೇನೆಂದು ಹೇಳಿದಾಗ ಆಶೀರ್ವಾದ-ಪ್ರೋತ್ಸಾಹ ನೀಡಿದವರು ಪೂಜ್ಯ ಡಾ|| ವಾಸ್ತಿ ವೆಂಕಟೇಶಯ್ಯಂಗಾರ್, ಎಂ. ಎ.; ತಪ್ಪುಗಳಿಲ್ಲದೆ ಅಚ್ಚುಕಟ್ಟಾಗಿ ಮುದ್ರಿಸಿ ಇದರ ಪ್ರಕಾಶನದ ಹೊಣೆಯನ್ನು ಹೊತ್ತವರು ಶ್ರೀರಾಮ ಪ್ರೆಸ್ ಮಾಲೀಕರಾದ ಶ್ರೀ ಎಸ್. ಟಿ. ಕೆಸ್ತೂರಿರಂಗಾಚಾರ್. ಈ ಎಲ್ಲ ವ್ಯಕ್ತಿ-ಸಂಸ್ಥೆಗಳಿಗೆ ನಾನು ಆಭಾರಿಯಾಗಿದ್ದೇನೆ.

ಇದರಿಂದ ಶ್ರೀವೈಷ್ಣವ ಸಮಾಜದ ರಕ್ಷಣೆ, ವಿಕಾಸಗಳಿಗೆ ಅಲ್ಪವಾದರೂ ನೆರವು ಸಿಕ್ಕಿದರೆ ನನ್ನ ಶ್ರಮ ಸಾರ್ಥಕವಾಯಿತೆಂದು ಭಾವಿಸುತ್ತೇನೆ. ಇದನ್ನು ಇನ್ನೂ ಉತ್ತಮ ಪಡಿಸಲು ಬರುವ ಸಲಹೆಗಳಿಗೆ ಸರ್ವದಾ ಸ್ವಾಗತ ಉಂಟು. ಶ್ರೀಭಗವದ್ರಾಮಾನುಜರ 956 ನೆಯ ತಿರುನಕ್ಷತ್ರದ, ಹಾಗೂ ರಾಮನಾಥಪುರದಲ್ಲಿ ಅವರ ತಿರುನಕ್ಷತ್ರದ ಸಪ್ತಾಹದ 16 ನೆಯ ಮಹೋತ್ಸವದ ಜ್ಞಾಪಕಾರ್ಥವಾಗಿ, ಕಾಣಿಕೆಯೆಂದು ಸಿದ್ಧಗೊಳಿಸಿದ ಈ ಕಿರು ಹೊತ್ತಿಗೆಯನ್ನು ಎಲ್ಲರೂ ಆದರದಿಂದ ಸ್ವಾಗತಿಸಿ ಉತ್ತೇಜನ ನೀಡುವರೆಂದು ನಂಬಿರುತ್ತೇನೆ.

ಬೆಂಗಳೂರು-೪
ದಿನಾಂಕ ೧೪-೫-೧೯೭೫

ಸೇವಾಕಾಂಕ್ಷಿ
ಹು. ಜ. ರಾಮಯ್ಯಂಗಾರ್.

1. ಗುರುಪರಂಪರಾಧ್ಯಾನಂ

ಅಸ್ಮದ್ಗುರುಭ್ಯೋ ನಮಃ ।
ಅಸ್ಮತ್ಪರಮಗುರುಭ್ಯೋ ನಮಃ ।
ಅಸ್ಮತ್ಸರ್ವಗುರುಭ್ಯೋ ನಮಃ ।
ಶ್ರೀಮತೇ ವೇದಾಂತಗುರವೇ ನಮಃ ।
ಶ್ರೀಮತೇ ರಾಮಾನುಜಾಯ ನಮಃ ।
ಶ್ರೀ ಪರಾಂಕುಶದಾಸಾಯ ನಮಃ ।
ಶ್ರೀಮದ್ಯಾಮುನಮುನಯೇ ನಮಃ ।
ಶ್ರೀರಾಮಮಿಶ್ರಾಯ ನಮಃ ।
ಶ್ರೀಪುಂಡರೀಕಾಕ್ಷಾಯ ನಮಃ ।
ಶ್ರೀಮನ್ನಾಥಮುನಯೇ ನಮಃ ।
ಶ್ರೀಮತೇ ಶಠಗೋಪಾಯ ನಮಃ ।
ಶ್ರೀಮತೇ ವಿಷ್ವಕ್ಸೇನಾಯ ನಮಃ ।
ಶ್ರಿಯೈ ನಮಃ ।
ಶ್ರೀಧರಾಯ ನಮಃ ॥

ಅಸ್ಮದ್ದೇಶಿಕಮಸ್ಮದೀಯಪರಮಾಚಾರ್ಯಾನಶೇಷಾನ್ ಗುರೂನ್ ।
ಶ್ರೀಮಲ್ಲಕ್ಷ್ಮಣಯೋಗಿಪುಂಗವಮಹಾಪೂರ್ಣೌ ಮುನಿಂ ಯಾಮುನಂ ॥
ರಾಮಂ ಪದ್ಮವಿಲೋಚನಂ ಮುನಿವರಂ ನಾಥಂ ಶಠದ್ವೇಷಿಣಂ ।
ಸೇನೇಶಂ ಶ್ರಿಯಮಿಂದಿರಾಸಹಚರಂ ನಾರಾಯಣಂ ಸಂಶ್ರಯೇ ॥

ಎನ್ನುಯಿರ್ ತಂದಳಿತ್ತವರೈಚ್ಚರಣಂಪುಕ್ಕು
ಯಾನಡೈವೇಯವರ್ ಕುರುಕ್ಕಳ್ ನಿರೈವಣಂಗಿ
ಪಿನ್ನರುಳಾಲ್ ಪೆರುಂಬೂದೂರ್ ವಂದವಳ್ಳಲ್
ಪೆರಿಯನಂಬಿಯಾಳವಂದಾರ್ ಮಣಕ್ಕಾಲ್ ನಂಬಿ
ನನ್ನೆರಿಯೈಯವರ್ಕುರೈತ್ತ ಉಯ್ಯಕ್ಕೊಂಡಾರ್
ನಾಥಮುನಿಶ್ಶಠಕೋಪನ್ ಸೇನೈನಾಥನ್
ಇನ್ನಮುದಲ್ ತಿರುಮಗಳೆನ್ನಿವರೈ ಮುನ್ನಿಟ್ಟು
ಎಂಬೆರುಮಾನ್ ತಿರುವಡಿಗಳ್ ಅಡೈಗಿನ್ರೇನೇ ॥

2. ಶ್ರೀವೈಷ್ಣವಮತದಸಾರ

ನಮ್ಮನ್ನು ಈ ಪ್ರಪಂಚಕ್ಕೆ ಯಾರು ಕಳುಹಿಸಿದರು ? ಪ್ರಪಂಚವೆಂದರೇನು ? ನಾವು ಯಾರು ? ನಮ್ಮ ದೇಹ, ಇಂದ್ರಿಯ, ಆತ್ಮ ಎಂದರೇನು ? ಬೇರೆಡೆಗಲ್ಲದೆ ಇಲ್ಲಿಗೇ ಏಕೆ ನಮ್ಮನ್ನು ಕಳುಹಿಸಿದರು ? ನಾವು ಎಲ್ಲಿಂದ ಬಂದೆವು ? ಎಲ್ಲಿಗೆ ಹೋಗಬೇಕಾಗಿದೆ ? ನಾವು ಇಹದಲ್ಲಿ ಅನುಭವಿಸುವ ಸುಖ–ದುಃಖ, ಕಷ್ಟ–ಕಾರ್ಪಣ್ಯಗಳಿಗೆ ಕಾರಣವೇನು ? ಬೇಡವಾದ ತೊಂದರೆಗಳನ್ನು ಪರಿಹರಿಸಿಕೊಳ್ಳಲು, ಇಷ್ಟವಾದ ಸುಖವನ್ನು ಶಾಶ್ವತವಾಗಿ ಮಾಡಿಕೊಳ್ಳಲು, ಏನು ಮಾಡಬೇಕು ? ಇವಾವುವೂ ಗೊತ್ತಿಲ್ಲದೆ ನಾವು ಭಯಂಕರ ಅಜ್ಞಾನ, ದುರ್ಬಲತೆ, ಅನಿಶ್ಚಯತೆಗಳಲ್ಲಿ ತೊಳಲಾಡುತ್ತಿದ್ದೇವೆ. ಶ್ರೇಷ್ಠವಾದ ಈ ಮಾನವ ಜೀವನವು ಸಿಕ್ಕಿರುವಾಗಲೇ ನಮ್ಮನ್ನು ಸೃಷ್ಟಿಸಿದ ಪರಮಾತ್ಮನ ಹಾಗೂ ಆತನ ಭಕ್ತರ ಸೇವೆ–ಕೈಂಕರ್ಯಗಳಲ್ಲಿ ಪ್ರೀತಿಯಿಂದ, ಫಲಾಪೇಕ್ಷೆ ಇಲ್ಲದೆ, ತೊಡಗುವುದರ ಮೂಲಕ ಆತನ ಕೃಪೆಗೆ ಪಾತ್ರರಾಗುವುದು ಜೀವನದ ಅತಿದೊಡ್ಡ ಆಧ್ಯಾತ್ಮಿಕ ಕರ್ತವ್ಯವಾಗಿದೆ. ಇದಕ್ಕೆ ಒದಗುವ ವಿಘ್ನಗಳನ್ನೆಲ್ಲ ನಿವಾರಿಸಿಕೊಳ್ಳಲು ಸತತವಾಗಿ ಯತ್ನಿಸಬೇಕು.

ಪರಮಾತ್ಮನ ರಾಜ್ಯವು ಭೂಲೋಕದಲ್ಲಿಯೇ ಇದೆ. ಜೀವನದಲ್ಲಿ ಉಂಟಾಗುವ ನೋವು, ಚಳಿ, ಗಾಳಿ, ಮಳೆ, ಬಿಸಿಲು, ದೈವಕೃಪೆಯಿಂದಲೇ ಬಂದುದರಿಂದ ಅವುಗಳನ್ನು ಸಹಿಸಿಕೊಳ್ಳಲು ಯತ್ನಿಸಬೇಕು. ಹಸಿವು, ಬಾಯಾರಿಕೆಗಳನ್ನು ಪರಿಹರಿಸಿಕೊಂಡರೂ ಅಪ್ರಯೋಜಕ. ಅಶಾಶ್ವತ ಆದ ಭೋಗಲಾಲಸೆಗಳನ್ನು ತ್ಯಜಿಸಬೇಕು. ಜಿಹ್ವಾ ಚಾಪಲ್ಯದಿಂದ ಷಡ್ರಸೋಪೇತವಾದ ರುಚಿಕರ ಭಕ್ಷ್ಯ ಭೋಜ್ಯಗಳನ್ನೂ, ದಿವ್ಯದುಕೂಲ ಆಭರಣಗಳನ್ನೂ ಬಯಸಬಾರದು. ನಿಷ್ಪ್ರಯೋಜಕವಾದ ವಾದವನ್ನು ಮಾಡಬಾರದು. ಜನರ ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಕುಗ್ಗದೆ, ನಾನು, ನನ್ನದು ಎಂಬ ಅಹಂಕಾರ, ಮಮಕಾರಗಳನ್ನು ತ್ಯಜಿಸಬೇಕು. ಅಜ್ಞ, ಅಲ್ಪಜ್ಞ ಆಗಿದ್ದು ಕರ್ಮ, ಜ್ಞಾನ, ಭಕ್ತಿ, ಪ್ರಪತ್ತಿಗಳನ್ನು ಸರಿಯಾಗಿ ಅನುಷ್ಠಿಸಲು ಅಶಕ್ತರಾದವರಿಗೆ ಆಚಾರ್ಯರ ಅನುಗ್ರಹವೆಂಬ ಐದನೆಯ ಉಪಾಯವೇ ಅತಿಸುಲಭವಾದುದು.

ಆದುದರಿಂದ ಕೆಲವು ಶ್ರೇಷ್ಠ ಆದರ್ಶಗಳನ್ನು ಇಟ್ಟುಕೊಂಡು **ಅವಕ್ಕೆ ಚಾಚೂ** ತಪ್ಪದೆ ನಡೆದುಕೊಳ್ಳುವ ಆಚಾರ್ಯರನ್ನು ಪೂರ್ಣವಾಗಿ ಅನುಸರಿಸಬೇಕು.

ಆಧ್ಯಾತ್ಮಿಕ ಪರಿಪೂರ್ಣತೆ ಮತ್ತು ಪರಮಾತ್ಮನ **ಅರಿವು** ಪಡೆಯುವ ವ್ಯಕ್ತಿಯ ಯತ್ನದಲ್ಲಿ ಗುರುವಿಗೆ ಪ್ರಮುಖಸ್ಥಾನವಿದೆ. ಯಾರು ಶಾಸ್ತ್ರಗಳ ಅರ್ಥವನ್ನು ಸರಿಯಾಗಿ ತಿಳಿದುಕೊಂಡು, ಸಂಗ್ರಹಿಸಿ, ಸುಲಭವಾಗಿ ಬೋಧಿಸುತ್ತಾರೋ, ಯಾರು ಕೇವಲ ಬೋಧನೆಯಿಂದಲೇ ತೃಪ್ತರಾಗದೆ, ಲೌಕಿಕರಿಗೆ ಉಪದೇಶಮಾಡಿ ಅವರನ್ನು ಸರಿಯಾದ ದಾರಿಗೆ ಎಳೆದು ಸದಾಚಾರದಲ್ಲಿ ನೆಲೆಗೊಳಿಸುವರೋ, ಜನರಿಗೆ ಉಪದೇಶಿಸುವುದು ಸುಲಭವಾದರೂ ತಾನು ಆಚರಿಸಿ ತೋರಿಸಿಕೊಡುವುದು ಕಷ್ಟಸಾಧ್ಯವಾದುದು. ಯಾರು ತಮ್ಮ ನಡೆನುಡಿಗಳಲ್ಲಿ ತಮ್ಮ ತತ್ತ್ವಗಳೆಲ್ಲವೂ ಮೂರ್ತಿವೆತ್ತಾಗಿ ಬರುವಂತೆ ಆದರ್ಶಜೀವನದ ಮೇಲ್ಪಂಕ್ತಿಯನ್ನು ಹಾಕಿಕೊಡುವರೋ ಅವರೇ ಆಚಾರ್ಯರು. ನಿರಹಂಕಾರಿ, ಪರಸಮೃದ್ಧಿಪ್ರಿಯ, ಖ್ಯಾತಿಲಾಭಾನಪೇಕ್ಷ, ಶಾಂತನವನೇ ಆದರ್ಶಗುರು, ಆಚಾರ್ಯನ್. "ಆಚಾರ್ಯ ದೇವೋ ಭವ" ಎಂಬ ಮಾತಿಗೆ ಮಹತ್ವನೀಡುವ **ಆಚಾರ್ಯಾಭಿಮಾನ** ವಿಶಿಷ್ಟಾದ್ವೈತಮತದ ಒಂದು ವೈಶಿಷ್ಟ್ಯ. ಶಿಷ್ಯನಿಗೆ ಈಶಾನುಗ್ರಹ ಸಿಗುವಂತೆ ಶಿಫಾರಸುಮಾಡಿ ಬೇರ್ಪಟ್ಟ ಜೀವಾತ್ಮ ಮತ್ತು ಪರಮಾತ್ಮರಿಬ್ಬರನ್ನೂ ಒಂದುಗೂಡಿಸುವವನೇ ಪೂರ್ಣವಾದ ಕರುಣೆಯನ್ನು ಹೊಂದಿದ ಆಚಾರ್ಯನ್. ಭಗವಂತನನ್ನು ಆಶ್ರಯಿಸಿರುವವಳೂ, ಎಲ್ಲರಿಂದ ಆಶ್ರಯಿಸಲ್ಪಟ್ಟವಳೂ, ಚೇತನರ ಮೊರೆಯನ್ನು ಆದರದಿಂದ ಕೇಳುವವಳೂ, ಎಲ್ಲರಿಗೂ ಹಿತವಚನವನ್ನು ಹೇಳುವವಳೂ, ದುರ್ಗುಣಗಳನ್ನು ಬಿಡುವಂತೆ ಮಾಡುವವಳೂ, ಇರುವ ಒಳ್ಳೆಯಗುಣವೊಂದನ್ನೇ ದೊಡ್ಡದುಮಾಡಿ ಭಗವಂತನಲ್ಲಿ ವಿಜ್ಞಾಪಿಸಿ ಚೇತನರಪರವಾಗಿ ವಾದಿಸುವ ವಕೀಲಳೂ, ಆದ ಶ್ರೀ ನಮ್ಮಗುರು. ವಿಷ್ಣುಪತ್ನಿಯಾದ ಶ್ರೀಲಕ್ಷ್ಮಿಯೇ ಅತಿದೊಡ್ಡಗುರುವಾಗಿ, ತನ್ನ ಮಧ್ಯಸ್ಥಿಕೆಯಿಂದ ಜೀವರಿಗೆ ಶ್ರೀಮನ್ನಾರಾಯಣನ ದಯೆ ಸಿಗುವಂತೆ ಸಹಾಯಮಾಡುತ್ತಾಳೆ. ಜೊತೆಗೆ ದುಷ್ಟಮಕ್ಕಳನ್ನೂ ಕ್ಷಮಿಸಿ ಪ್ರೀತಿಯಿಂದ ರಕ್ಷಿಸುವ ತಾಯಿಯೂ ಆಗಿರುತ್ತಾಳೆ. ಆದುದರಿಂದಲೇ ಇದಕ್ಕೆ **ಶ್ರೀವೈಷ್ಣವಮತ**ವೆಂದು ಹೆಸರು.

ದೈವೀಕೃಪೆ ಸಿಗಲು ಕಷ್ಟಕರವಾದ ಜ್ಞಾನ, ತಪಸ್ಸು, ಕರ್ಮಗಳ

ಆವಶ್ಯಕತೆಯಿಲ್ಲ. ಸರ್ವತಂತ್ರಸ್ವತಂತ್ರ, ಸರ್ವೇಶ್ವರ, ಅಸಂಖ್ಯೇಯಕಲ್ಯಾಣಗುಣ ಪೂರ್ಣನಾದ ಆ ಭಗವಂತನ ದಿವ್ಯನಾಮವನ್ನು ಕೇಳುವುದು, ಹಾಡುವುದು, ಸ್ಮರಿಸುವುದು, ಅವನನ್ನು ಪೂಜಿಸುವುದು, ಆಶ್ರಯಿಸುವುದು ಮುಖ್ಯ. ಶರಣಾಗತಿಯೆ ಮೋಕ್ಷಸಾಧನೆಗೆ ಶ್ರೇಷ್ಠವಾದಮಾರ್ಗ, ಸುಲಭವಾದ ಉಪಾಯ. ಇದಕ್ಕೆ ಜಾತಿ, ಕುಲ, ಲಿಂಗ, ಗುಣ, ದೇಶ, ಅವಸ್ಥೆ, ಯಾವುದಾದರೂ ಆಗಬಹುದು. ಭಗವದಭಿಪ್ರಾಯಕ್ಕೆ ಅನುಕೂಲನಾಗಿರುವುದು, ಭಗವದಿಚ್ಛೆಗೆ ವಿರುದ್ಧವಾಗಿ ಹೋಗದಿರುವುದು, ಶರಣಾಗತರನ್ನು ರಕ್ಷಿಸಿಯೇ ತೀರುತ್ತಾನೆ ಎಂಬ ಪೂರ್ಣವಿಶ್ವಾಸ, ಸರ್ವಲೋಕಶರಣ್ಯನಾದ ಭಗವಂತನೊಬ್ಬನೇ ಗತಿ ಎಂಬ ಮನೋನಿಶ್ಚಯ, ಭಗವಂತನಲ್ಲಿ ಪೂರ್ಣವಾಗಿ ಆತ್ಮವನ್ನು ಒಪ್ಪಿಸಿ ನಿಶ್ಚಿಂತನಾಗಿರುವುದು, ತಾನು ಮಾಡಿದ ಅಪರಾಧಗಳೆಲ್ಲವನ್ನೂ ಭಗವಂತನಲ್ಲಿ ನಿಷ್ಕಾಪಟ್ಯದಿಂದ ನಿವೇದಿಸಿಕೊಳ್ಳುವುದು—ಇವು ಪ್ರಪತ್ತಿಯ ಆರು ಮುಖ್ಯ ಅಂಗಗಳು. ಜೀವನವಿಚಾರದಲ್ಲಿ ನಮ್ಮ ಮನೋಭಾವನೆಯನ್ನು ಬದಲಾಯಿಸಿಕೊಂಡು ನಮ್ಮ ಆಚಾರ ವಿಚಾರಗಳೆಲ್ಲವೂ ಪ್ರಾಮಾಣಿಕವಾಗಿ ಪರಮಾತ್ಮನ ಸೇವಾಪ್ರವೃತ್ತಿಯಿಂದಲೇ ಆಗಬೇಕು. ದೇವಸೇವಕನೆನಿಸಿಕೊಳ್ಳುವುದೇ ಮಾನವನ ಅತಿದೊಡ್ಡ ಆದರ್ಶವಾಗಬೇಕು.

"ವೇದಾಂತೋಕ್ತ ವಿಜ್ಞಾನಂ ವಿಶ್ವಾಸಶ್ಚೇತಿ ಶಕ್ತಯಸ್ತಿಸ್ರಃ ಯಾಸಾಂ ಸ್ಥೈರ್ಯೋದಯನಿತ್ಯಂ ಶಾಂತಿಸಮೃದ್ಧಿರ್ಭವಿಷ್ಯತಿ ಜಗತಿ" ಜ್ಞಾನ, ಭಕ್ತಿಗಳ ಜೊತೆಗೆ ಆಚಾರಾನುಷ್ಠಾನ ಸೇರಿದಾಗಲೇ ಕ್ಲೇಶಗಳು ಹೋಗಿ ಪರಮ ಸುಖಸಿಗಬಲ್ಲದು. ಅಂದರೆ ಮಾನವನು ತನ್ನ ಜೀವನದಲ್ಲಿ ಸತ್ಯ, ಸೌಂದರ್ಯ, ಸೌಶೀಲ್ಯಗಳೆಂಬ ಮೂರು ಕಲ್ಯಾಣ ಗುಣಗಳನ್ನು ಹೊಂದಿದ್ದು, ಸ್ವಾರ್ಥವನ್ನು ತ್ಯಜಿಸಿ, ಪರಾರ್ಥ-ಪರಮಾರ್ಥಗಳಿಗಾಗಿ ಶ್ರಮಿಸಿದರೆ, ಪ್ರಪಂಚದಲ್ಲಿ ಶಾಂತಿ, ಸುಖ, ಸಮೃದ್ಧಿಗಳುಂಟಾಗಿ ಭೂಲೋಕವೇ ಸ್ವರ್ಗವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ. ಇದು ಸೂಕ್ಷ್ಮವಾಗಿ ಶ್ರೀವೈಷ್ಣವಮತಸಾರ ಎನ್ನಬಹುದು.

3. ಶ್ರೀವೈಷ್ಣವಸಿದ್ಧಾಂತದ ಪರಿಚಯ

ಸಂಭರ್ತೇತಿ ತಥಾ ಭರ್ತಾ ಭಕಾರೋರ್ಥದ್ವಯಾನ್ವಿತಃ ।
ನೇತಾ ಗಮಯಿತಾ ಸ್ರಷ್ಟಾ ಗಕಾರಾರ್ಥಸ್ತಥಾ ಮುನೇ ॥

ಘ' ಎಂದರೆ ಎಲ್ಲರನ್ನೂ ಪೋಷಿಸುವಾತ, ಎಲ್ಲರನ್ನೂ ಧರಿಸುವ ಆಧಾರಸ್ವರೂಪ. 'ಗ' ಎಂದರೆ ಸೃಷ್ಟಿಮಾಡಲು, ಕರ್ಮಫಲಪ್ರಾಪ್ತಿಗೆ, ಹಾಗೂ ಪ್ರಾಪ್ಯಸ್ಥಾನಕ್ಕೆ ಕಳುಹಿಸಲು, ಕಾರಣಕರ್ತನಾದವ.

ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ |
ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ ||

'ಭಗ' ಎಂದರೆ ಸಮಗ್ರವಾದ ಐಶ್ವರ್ಯ, ಧರ್ಮ, ಯಶಸ್ಸು, ಶ್ರೀ, ಜ್ಞಾನ, ವೈರಾಗ್ಯ ಎಂಬ ಆರು ಲಕ್ಷಣಗಳುಳ್ಳವಾತ.

ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಂ |
ವೇತ್ತಿ ವಿದ್ಯಾಮವಿದ್ಯಾಂ ಚ ಸವಾಚ್ಯೋ ಭಗವಾನ್ ಇತಿ ||

ಪ್ರಪಂಚದ ಉತ್ಪತ್ತಿ-ಪ್ರಳಯಗಳನ್ನೂ, ಪ್ರಾಣಿಗಳ ಬರುವಿಕೆ-ಹೋಗುವಿಕೆಗಳನ್ನೂ, ವಿದ್ಯೆ-ಅವಿದ್ಯೆಗಳ ಕಾಮಕರ್ಮಗಳ ಫಲವನ್ನೂ ತಿಳಿದಿರುವಾತನೇ ಭಗವಾನ್.

ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಾಂಸ್ಯಶೇಷತಃ |
ಭಗವಚ್ಛಬ್ದವಾಚ್ಯಾನಿ ವಿನಾ ಹೇಯೈರ್ಗುಣಾದಿಭಿಃ ||

ಯಾವ ರೀತಿಯ ದುಷ್ಟಗುಣಗಳಿಲ್ಲದೆ, ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ, ತೇಜಸ್ಸು ಎಂಬೀ ಆರು ಕಲ್ಯಾಣ ಗುಣಗಳ ಪ್ರತೀಕವೇ ಭಗವಂತ.

ಹೀಗೆ ಚೇತನ ಅಥವಾ ಜೀವಿ, ಅಚೇತನ ಅಥವಾ ಪ್ರಕೃತಿಗಳೆರಡನ್ನೂ ಶರೀರವಾಗಿ ಹೊಂದಿರುವ ವಿಶಿಷ್ಟನಾದ ಈಶ್ವರ ಅಥವಾ ಶ್ರೀಮನ್ನಾರಾಯಣನಿಗೆ ಸದೃಶ, ಸಮಾನ, ಅಮಮ ಬೇರೆ ಇರುವುದಿಲ್ಲ. ದೇಹದ ಪಂಚೇಂದ್ರಿಯಗಳ ಪ್ರಭಾವಕ್ಕೆ ಒಳಗಾಗಿರುವ ಜೀವನಿಗೆ ಪರಮಾತ್ಮನ ಇರುವಿಕೆಯನ್ನು ಅರಿಯಲು, ಪರಿಪೂರ್ಣತೆಯನ್ನು ಪಡೆಯಲು ಯೋಗ್ಯತೆ, ಸಾಧ್ಯತೆಗಳು ಇವೆ. ಸಂಸಾರಿಗಳೆಲ್ಲರೂ ಪರಮಾತ್ಮನನ್ನು ಆಶ್ರಯಿಸಿ ಈ ಸಂಸಾರದ ಕ್ಲೇಶಗಳಿಂದ ಮುಕ್ತರಾಗಿ ಪರಮಪದಕ್ಕೆ ಹೋಗಿ ಅಲ್ಲಿ ದಿವ್ಯಸೂರಿಗಳಂತೆ ಸ್ವತಂತ್ರವ್ಯಕ್ತಿತ್ವವನ್ನು ಹೊಂದಿ ಸದಾ ಪರಮಾನಂದಭರಿತರಾಗಿರಬಹುದು. ಆದರೆ ಈ ಮಹದಾನಂದದ ಬ್ರಹ್ಮಾನುಭವದ ಅರಿವಿಲ್ಲದೆ, ಅದನ್ನರಿಯಲು ಆಸೆ ಇಲ್ಲದೆ, ಮೋಹಾಸ್ಪದವಾದ ಈ ಜಗತ್ತಿನ ಅಜ್ಞಾನವೆಂಬ ಇರುಳಿನಲ್ಲಿರುವ,

ಹಾಗು ಪ್ರಾಪಂಚಿಕ ಭೋಗನಿರತರಾಗಿ ಜನನಮರಣ ಪರಂಪರೆಗೆ ಗುರಿಯಾಗಿ ತೊಳಲುತ್ತಿರುವ ಸಂಸಾರಿಗಳ ದುರ್ಗತಿಯನ್ನು ಸಹಿಸಲಾರದೆ, ಅವರು ಸದ್ವಿವೇಕಪರರಾಗಿ ತನ್ನನ್ನು ಆಶ್ರಯಿಸಿ ಉಜ್ಜೀವಿಸಲಿ ಎಂಬ ಹಿರಿಯಾಸೆಯಿಂದ, ಭಗವಂತನು ಮಹರ್ಷಿಗಳ ಮೂಲಕ ಪ್ರಚಾರಕ್ಕೆ ತಂದ ವೇದ, ವೇದಾಂಗ, ಆಗಮ, ಪುರಾಣ, ಇತಿಹಾಸ, ಶಾಸ್ತ್ರಗಳೆಂಬ ಜ್ಞಾನದೀಪಿಗೆಯನ್ನು ಸರಿಯಾಗಿ ಬಳಸಿಕೊಳ್ಳಲಿಲ್ಲ. ಭಕ್ತಿಯೆಂಬ ಸಿದ್ಧಾಂಜನದಿಂದ ಅವರ ಹೃದಯದ ಕತ್ತಲೆಯು ಅಳಿಯಲಿಲ್ಲ; ಮಾಯೆ, ವಂಚನೆ ಕಪಟಗಳನ್ನು ತೊರೆದು, ಡಂಭರಹಿತ ಧರ್ಮವನ್ನು ಆಚರಿಸದೆ, ಜ್ಞಾನಾನುಷ್ಠಾನ ಪೂರ್ತಿಯುಕ್ತ, ಸದಾಚಾರವನ್ನು ಆಶ್ರಯಿಸಿದಾಗ ಮಾತ್ರ ಆತನ ಕೃಪೆಯಿಂದ ಸುಜ್ಞಾನ ಬರುತ್ತದೆ. ಭಕ್ತಿ ಉಂಟಾಗಿ ಹೃದಯ ಶುದ್ಧವಾಗುತ್ತದೆ. ಶಾಸ್ತ್ರಗಳ ತತ್ತ್ವಾರ್ಥ ಗೋಚರಿಸುತ್ತದೆ. ಭಗವಂತನ ಸಾಕ್ಷಾತ್ಕಾರವಾಗುತ್ತದೆ.

ದುಷ್ಟನಿಗ್ರಹ, ಶಿಷ್ಟಪರಿಪಾಲನೆಗೆ ಹಾಗೂ ಧರ್ಮಸ್ಥಾಪನೆಗೆ ಭಗವಂತನು ಈ ಭೂಮಿಯ ಮೇಲೆ ತಾನೇ ರಾಮಕೃಷ್ಣಾದಿ ಅವತಾರಗಳನ್ನು ತಾಳಿ, ಗುರುಗಳ ಸೇವೆಮಾಡಿ ಧರ್ಮವನ್ನು ಸರಿಯಾಗಿ ಆಚರಿಸಿ ತೋರಿಸುತ್ತಾನೆ. ಆದರೆ ಭಗವಂತನ ಈ ಅವತಾರಗಳನ್ನು ಮನುಷ್ಯರೆಂದೇ ಭಾವಿಸಿ, ಅವರನ್ನು ಪೂಜಿಸಿ, ಗೌರವಿಸದೆ ಅವರೊಡನೆ ಹೋರಾಡಿ, ಅಧೋಗತಿಗೆ ಇಳಿದರು. ಇದನ್ನೆಲ್ಲಾ ನೋಡಿದ ಸರ್ವೇಶ್ವರನು ಸಂಸಾರಿಗಳನ್ನು ತಿದ್ದಿ ಸರಿಯಾದ ಮಾರ್ಗದಲ್ಲಿ ತರಲು ಸಜಾತೀಯರೇ ಸರಿ ಎಂದು ಭಾವಿಸಿ, ಸಂಕಲ್ಪಿಸಿ ಭೂಲೋಕದಲ್ಲಿ ಅನೇಕ ಸಂಸಾರಿಚೇತನರ ಮೇಲೆ ವಿಶೇಷ ಕಟಾಕ್ಷವನ್ನು ಬೀರಿ, ಅನುಗ್ರಹಿಸಿ, ಅವರ ಅಜ್ಞಾನವು ಅಳಿಯುವಂತೆ, ಭಕ್ತಿಯು ಪರಿಪಾಕವಾಗುವಂತೆ ಮಾಡಿದನು. ಅವರೇ ಆಳ್ವಾರರುಗಳು. ಇವರು ಮಹರ್ಷಿಗಳಂತೆ ಸ್ವಪ್ರಯತ್ನದಿಂದ ಅಥವಾ ಜ್ಞಾನದಿಂದ ಪರತತ್ತ್ವದ ಸಾಕ್ಷಾತ್ಕಾರ ಪಡೆದವರಲ್ಲ. ಭಗವಂತನು ತಾನಾಗಿ ಬಂದು ಅವರಿಗೆ ತನ್ನ ಸಂದರ್ಶನಾನುಭವಗಳನ್ನು ಕರುಣಿಸಿದಾಗ, ಅದರಿಂದ ಪ್ರೇರಿತರಾಗಿ ತಾವು ಕಂಡ ಅನುಭವಗಳನ್ನು ತಮ್ಮ ತಾಯಿನುಡಿಯಲ್ಲಿ ಇತರರ ಉದ್ಧಾರ

ಕ್ಕಾಗಿ ಭಕ್ತಿಪೂರ್ವಕವಾಗಿ ಹಾಡಿದ್ದಾರೆ. ಹೀಗೆ ನಂದಿಹೋಗಿದ್ದ ದೈವಭಕ್ತಿ ಎಂಬ ಉರಿಯನ್ನು ಪುನಃ ಹೊತ್ತಿಸಲು ಬಹಳವಾಗಿ ಯತ್ನಿಸಿದ ಹಾಗೂ ಪರಮಭಕ್ತರೆಂದು ಪ್ರಸಿದ್ಧರಾಗಿರುವವರು ಹನ್ನೆರಡು ಮಂದಿ ಆಳ್ವಾರರುಗಳು ದಕ್ಷಿಣ ಭಾರತದಲ್ಲಿ ಪ್ರಸಿದ್ಧರಾಗಿದ್ದರು.

ಪಲ್ಲವ ರಾಜ್ಯದ ಪೊಯ್ಗೈಯಾಳ್ವಾರ್, ಭೂತತ್ತಾಳ್ವಾರ್, ಪೇಯಾಳ್ವಾರ್, ತಿರುಮಳಿಶೈಯಾಳ್ವಾರ್; ಪಾಂಡ್ಯರಾಜ್ಯದ ನಮ್ಮಾಳ್ವಾರ್, ಮಧುರಕವಿಯಾಳ್ವಾರ್, ಪೆರಿಯಾಳ್ವಾರ್ ಆಂಡಾಳ್; ಚೇರರಾಜ್ಯದ ಕುಲಶೇಖರಾಳ್ವಾರ್; ಚೋಳರಾಜ್ಯದ ತೊಂಡರಡಿಪ್ಪೊಡಿಯಾಳ್ವಾರ್, ತಿರುಪ್ಪಾಣಾಳ್ವಾರ್, ತಿರುಮಂಗೈಯಾಳ್ವಾರ್; ಹೀಗೆ ಈ ಹನ್ನೆರಡು ಜನರೂ ವಿವಿಧ ಪ್ರಾಂತ, ಜಾತಿ, ಅಂತಸ್ತುಗಳಿಗೆ ಸೇರಿದ್ದು ನದಿಯತೀರದ ಪುಣ್ಯಕ್ಷೇತ್ರಗಳಲ್ಲಿ ಅವತರಿಸಿದ್ದರು. ಪ್ರಾಚೀನ ಋಷಿಗಳು ತಾವು ಕಂಡ ಭಗವದ್ವಿಷಯವನ್ನು ಸಂಸ್ಕೃತದ ವೇದಗಳಲ್ಲಿ ಹೇಳಿದಂತೆ, ಈ ಆಳ್ವಾರರುಗಳು ಭಾಗವತ ಸಂಪ್ರದಾಯದ ವಿಷ್ಣು ಪೂಜೆ ಮತ್ತು ಭಕ್ತಿ ಮಾರ್ಗಗಳನ್ನು ತಮ್ಮ ತಾಯಿ ನುಡಿಯಾದ ತಮಿಳಿನಲ್ಲಿ ತಿರುವಾಯ್ಮೊಳಿ ಅಥವಾ ದಿವ್ಯ ಪ್ರಬಂಧಗಳ ಮೂಲಕ ಪ್ರಚಾರ ಮಾಡಿದ್ದಾರೆ. ಪರಮಾತ್ಮನೊಡನೆ ಹೆಚ್ಚು ಸಂಬಂಧ ಕಲ್ಪಿಸಿಕೊಳ್ಳಲು ಯತ್ನಿಸಿದ ಒಂದು ಕೂಗನ್ನು, ತಮ್ಮ ಹೃದಯದಾಹವನ್ನು ನಮಗೆ ತಿಳಿಯುವ ಸುಲಭ ಭಾಷೆಯಲ್ಲಿ ತಿಳಿಸಿದ್ದಾರೆ. ಕವಿ ಮತ್ತು ಗಾಯಕರಾಗಿದ್ದ ಇವರು ವಿಷ್ಣುವನ್ನು ಹಾಡಿ ಹೊಗಳಿದ ಮಧುರ ಗೀತೆಗಳು ನಾಲ್ಕು ಸಾವಿರ. ಸಂಸ್ಕೃತದಲ್ಲಿರುವ ನಾಲ್ಕು ವೇದಗಳ ಸಾರವನ್ನು ತಿಳಿಸುವ ಈ ನಾಲಾಯಿರ ಪ್ರಬಂಧವು ದ್ರಾವಿಡ ವೇದವೆನಿಸಿಕೊಂಡಿದೆ. ಸಿದ್ಧಾಂತ ಶ್ರೀವೈಷ್ಣವರೂ ಪವಿತ್ರವಾದ ಸಂದರ್ಭಗಳಲ್ಲಿಯೂ ಸಂಸ್ಕೃತವೇದಮಂತ್ರದೊಂದಿಗೆ ದಿವ್ಯ ಪ್ರಬಂಧಗಳನ್ನೂ ದೇವಾಲಯದಲ್ಲಿ ಹಾಡುತ್ತಾರೆ.

ನಮ್ಮಾಳ್ವಾರರು (ಶಠಗೋಪ, ವಿಷ್ಣುಚಿತ್ತ) ಸಾವಿರಾರು ತಮಿಳು ಪದ್ಯಗಳನ್ನು ರಚಿಸಿ, ವಿಷ್ಣುವನ್ನೂ, ಶ್ರೀರಂಗ, ಕಂಚಿ, ತಿರುಪತಿ, ತಿರುನಾರಾಯಣಪುರಗಳಲ್ಲಿನ ಆವನ ಅರ್ಚಾವತಾರಮೂರ್ತಿಗಳನ್ನೂ ಸ್ತುತಿಸಿ ಆ ಮೂಲಕ ಭಕ್ತಿ, ಪ್ರಪತ್ತಿಗಳ ಸ್ವರೂಪವನ್ನು ಪ್ರಕಟಿಸಿ ಪ್ರಸನ್ನಜನಕೂಟಸ್ಥರೆಂದು

ಪ್ರಸಿದ್ಧರಾದವರು. ಮತ್ತು "ಭಕ್ತಾಮೃತಂ ವಿಶ್ವಜನಾನುಮೋದನಂ. ಸರ್ವಾರ್ಥದಂ ಶ್ರೀಶಠಗೋಪವಾಙ್ಮಯಂ। ಸಹಸ್ರಶಾಖೋಪನಿಷತ್ಸಮಾಗಮಂ, ನಮಾಮ್ಯಹಂ ದ್ರಾವಿಡವೇದಸಾಗರಂ" ಎಂದು ಹೊಗಳಿಸಿಕೊಂಡರು ಉಳಿದ ಕೆಲವು ಆಳ್ವಾರರುಗಳೂ ಭಕ್ತಿ, ಪ್ರಪತ್ತಿಗಳನ್ನು ಸ್ವಾನುಷ್ಠಾನಪೂರ್ವಕವಾಗಿ ತೋರಿಸಿ ಕೊಟ್ಟಿದ್ದಾರೆ.

ಆಳ್ವಾರರುಗಳ ಭಕ್ತಿಪಂಥದಲ್ಲಿ ಬುದ್ಧಿಗಿಂತಲೂ ಭಾವಕ್ಕೇ ಹೆಚ್ಚು ಬೆಲೆ; ಜ್ಞಾನಮಾರ್ಗಕ್ಕಿಂತಲೂ ಭಕ್ತಿಮಾರ್ಗವು ಸುಗಮ. ನಾರಾಯಣನೇ ಜಗದಾದಿ ಕಾರಣ. ಅವನು ಜಗತ್ತಿನಲ್ಲಿ ಅಂತರ್ಯಾಮಿಯಾಗಿದ್ದುಕೊಂಡು ಸಂಸಾರ ಚಕ್ರವನ್ನು ತಿರುಗಿಸುತ್ತಿರುವನು. ಅವನೊಬ್ಬನೇ ಉಪಾಸ್ಯನು. ಅವನಲ್ಲಿ ಆತ್ಮಸಮರ್ಪಣೆ ಮಾಡುವುದೇ ಪರಮಪುರುಷಾರ್ಥ. ಇವನ ಶರೀರವಾದ ಜಗತ್ತಿನಲ್ಲಿ ಆತ್ಮನೂ ಇವನೇ. ಚೇತನ-ಅಚೇತನ ವಸ್ತುಗಳೆಲ್ಲವೂ ಅವನ ಪ್ರಕಾರಗಳು ಮತ್ತು ಅವನಿಗೆ ಶೇಷಭೂತವಾದವುಗಳು. ಸರ್ವವ್ಯಾಪಿ, ಅಕ್ಷರ, ಅಮೃತ, ಸತ್ಯ-ಸೌಂದರ್ಯಗಳ ನೆಲೆ, ಸಚ್ಚಿದಾನಂದಸ್ವರೂಪ, ಕಲ್ಯಾಣ ಗುಣಪರಿಪೂರ್ಣ, ಕೃಪಾಪೂರಿತ, ಆದ ಶ್ರೀಮನ್ನಾರಾಯಣನ ವಕ್ಷಃಸ್ಥಲನಿವಾಸಿಯಾದ ಲಕ್ಷ್ಮೀದೇವಿಯೇ ಜಗನ್ಮಾತೆ, ಕೃಪೆ. ಭಗವಂತನು ತನ್ನ ಸೌಶೀಲ್ಯ, ಸೌಲಭ್ಯ, ವಾತ್ಸಲ್ಯಗುಣಗಳ ಪ್ರಕಾಶಕ್ಕಾಗಿ, ರೂಪ, ಆಕಾರಗಳಿಲ್ಲದಿದ್ದರೂ ರಾಮ ಕೃಷ್ಣಾದ್ಯವತಾರಗಳನ್ನು ಎತ್ತಿದ್ದಲ್ಲದೆ ಕಲ್ಲು, ಮರ, ಕಂಚು ಮುಂತಾದ ಪ್ರತಿಮೆಗಳಲ್ಲಿ ಅರ್ಚಾರೂಪಿಯಾಗಿ ತನ್ನ ಭಕ್ತರಿಗೆ ದರ್ಶನ ನೀಡುತ್ತಾ ಅವರಿಂದ ಅರ್ಚಿಸಲ್ಪಡುತ್ತಿದ್ದಾನೆ. ಆಯಾ ಸನ್ನಿವೇಶಗಳಿಗೆ ತಕ್ಕಂತೆ ಪರಮಾತ್ಮನು ತನ್ನ ಭಕ್ತರಿಗೆ ತಂದೆ, ತಾಯಿ, ಮಿತ್ರ. ಒಡೆಯ, ಕಾಂತ, ಗುರು ಆಗಿ ಕಾಣಿಸಿಕೊಳ್ಳುತ್ತಾನೆ. ಎಲ್ಲರ ಹೃದಯದಲ್ಲಿಯೂ ಅಂತರ್ಯಾಮಿಯಾಗಿರುವ ಭಗವಂತನು ನಮ್ಮ ಚಿತ್ತಶುದ್ಧಿಯಾದಾಗ ನಮ್ಮೊಳಗೇ ಕಾಣಿಸಿಕೊಳ್ಳುತ್ತಾನೆ. ಭಗವಂತನ ಅಥವಾ ಭಾಗವತರ ಕೈಂಕರ್ಯದಿಂದ ಜೀವನವು ಸಾರ್ಥಕವಾಗುತ್ತದೆ. ಭಗವಂತನು ಪ್ರೇಮಸ್ವರೂಪನಾದುದರಿಂದ ಪರಮಾತ್ಮ - ಜೀವಾತ್ಮರಿಗೆ ಪ್ರೇಮದಿಂದಲೇ ನಿಕಟ ಸಂಬಂಧ ಉಂಟಾಗಿ ಸಾಯುಜ್ಯ ಪಡೆಯಲು ಸಾಧ್ಯವಾಗುತ್ತದೆ. ನಾನು, ನನ್ನದು ಎಂಬ ಅಹಂಕಾರವನ್ನೂ, ವಿಷಯ ಭೋಗಗಳ ಆಸೆಯನ್ನೂ ತೊರೆದು, ನಮ್ಮ ಕರ್ಮಗಳನ್ನೆಲ್ಲಾ

ಫಲಾಪೇಕ್ಷೆ ಇಲ್ಲದೆ ಪರಮಾತ್ಮನ ಸೇವೆ ಎಂಬ ಭಾವದಿ ಮಾಡಬೇಕು. ಭಗವಂತನ ಸೇವೆ ಅಥವಾ ಕೈಂಕರ್ಯವನ್ನಿತ್ತು ಅದನ್ನು ಬಿಟ್ಟು ಬೇರೆ ಪ್ರಯೋಜನ ಇರುವುದಿಲ್ಲ.

ಭಕ್ತಿಗಿಂತಲೂ ಪ್ರಪತ್ತಿಯು ಸುಲಭ. ಸಂಪೂರ್ಣ ಶರಣಾಗತಿಯೇ ಪ್ರಪತ್ತಿ. ಸ್ವಾಮಿಯಲ್ಲಿ ತನ್ನ ಆತ್ಮನ್ಯಾಸ, ಇದಕ್ಕೆ ವರ್ಣಾಶ್ರಮಾಧಿಕಾರಗಳು ಬೇಕಿಲ್ಲ; ಕಾಲನಿಯ ಅವಸ್ಥೆಗಳು ಇದಕ್ಕೆ ಇಲ್ಲ; ಪಂಡಿತ-ಪಾಮರ, ಹೆಣ್ಣು-ಗಂಡು, ಸ್ಪೃಶ್ಯ–ಅಸ್ಪೃಶ್ಯ, ಮೇಲು-ಕೀಳು ಎಲ್ಲರೂ ಇದಕ್ಕೆ ಅಧಿಕಾರಿಗಳು. ನೀನೇ ಶರಣ್ಯ, ನೀನಲ್ಲದೆ ನನಗೆ ಬೇರೆ ಯಾವ ಗತಿ ಇಲ್ಲ–ಎಂಬ ಆತ್ಮನಿವೇದನಾ ಭಾವವೇ ಪ್ರಪತ್ತಿಯೆನಿಸಿಕೊಳ್ಳುವುದು. ಇದೇ ಆಳ್ವಾರರುಗಳ ಸಂದೇಶ.

ಭಗವಾನ್ ವ್ಯಾಸಮಹರ್ಷಿಗಳು ವೇದಾಂತ ಸೂತ್ರಗಳಿಗೆ ಅವರ ಪ್ರಿಯ ಶಿಷ್ಯರಾದ ಬೋಧಾಯನ ಮಹರ್ಷಿಗಳು ವಿಸ್ತೃತವಾದ ವೃತ್ತಿ ಎನ್ನುವ, ಉಪನಿಷತ್ತು ಮತ್ತು ಭಗವದ್ಗೀತೆಗಳ ಭಾಷ್ಯವನ್ನು ರಚಿಸಿದ್ದರು. ಆಚಾರ್ಯರ ಟಂಕ, ದ್ರಮಿಡ ಮುಂತಾದವರು ಇದಕ್ಕೆ ವ್ಯಾಖ್ಯಾನವನ್ನು ಬರೆದಿದ್ದರು.

ಆಳ್ವಾರರುಗಳಿಂದ ರಚಿತವಾಗಿ ಕಾಲಕ್ರಮದಲ್ಲಿ ಲುಪ್ತವಾಗಿದ್ದ ಮಧುರ ಭಕ್ತಿಗೀತೆಗಳನ್ನು 'ನಾಲಾಯಿರ ಪ್ರಬಂಧ' ಎಂಬುದಾಗಿ ಸಂಗ್ರಹಿಸಿದವರು ಶ್ರೀರಂಗದಲ್ಲಿದ್ದ ರಂಗನಾಥಾಚಾರ್ಯ ಅಥವಾ ನಾಥಮುನಿಗಳು. ಇವರು ಯೋಗದಲ್ಲಿ ಎತ್ತಿದ ಕೈ. ಸಂಸ್ಕೃತಸಾಹಿತ್ಯದ ಪೂರ್ಣಪಂಡಿತರು. ಕೆಲವು ಸ್ವತಂತ್ರ ಗ್ರಂಥಗಳನ್ನು ರಚಿಸಿದ್ದಾರೆ. ಈ ದಿವ್ಯಪ್ರಬಂಧಗಳನ್ನು ದೇವರ ರಥೋತ್ಸವ ಹಾಗೂ ವಿಶೇಷ ದಿನಗಳಲ್ಲಿ ಹಾಡುವ ಪದ್ಧತಿಯನ್ನು ಜಾರಿಗೆ ತಂದರು. ಇದರ ಫಲವಾಗಿ ಸಂಸ್ಕೃತ ತಮಿಳು ಎರಡರ ಉಭಯವೇದಾಂತ ಸಂಪ್ರದಾಯ ಹುಟ್ಟಿತು.

ಆ ಕಾಲದ ಪದ್ಧತಿಯಂತೆ ನಾಥಮುನಿಗಳು ತೀರ್ಥಯಾತ್ರೆಗಾಗಿ ಹೊರಟು ಶ್ರೀರಂಗ, ಕಂಚಿ, ತಿರುಪತಿ, ದ್ವಾರಕೆ, ಬೃಂದಾವನ, ಮಥುರ, ಅಯೋಧ್ಯೆ, ಬದರಿ ಮುಂತಾದ ದಿವ್ಯಕ್ಷೇತ್ರಗಳನ್ನು ಸಂದರ್ಶಿಸಿದರು. ಇದರ ಫಲವಾಗಿ

ರಾಮೇಶ್ವರದಿಂದ ಕಾಶ್ಮೀರದವರೆಗೆ ವಿಷ್ಣುಭಕ್ತಿ, ಶ್ರೀವೈಷ್ಣವಮತಗಳು ಪ್ರಚಾರವಾದುವು. ಗೃಹಸ್ಥಾಶ್ರಮದಲ್ಲಿದ್ದುಕೊಂಡೇ ತಮ್ಮನ್ನು ಆಶ್ರಯಿಸಿ ಬಂದವರಿಗೆಲ್ಲ ಶರಣಾಗತಿ ಮಂತ್ರವನ್ನು ಉಪದೇಶಿಸಿ ಶ್ರೀವೈಷ್ಣವಾಚಾರ್ಯರುಗಳಲ್ಲಿ ಅಗ್ರಗಣ್ಯರಾಗಿ ವಿಶಿಷ್ಟಾದ್ವೈತ ಸಿದ್ಧಾಂತದ **ಪ್ರಥಮಾಚಾರ್ಯ**ರೆನಿಸಿಕೊಂಡರು. "ನಮೋ ಅಚಿಂತ್ಯಾದ್ಭುತಾಕ್ಲಿಷ್ಟಜ್ಞಾನವೈರಾಗ್ಯರಾಶಯೇ ನಾಥಾಯ ಮುನಯೇಽಗಾಧಭಗವದ್ಭಕ್ತಿಸಿಂಧವೇ" ಎಂದು ಹೊಗಳಿಸಿಕೊಂಡರು.

ನಾಥಮುನಿಗಳ ಎಂಟು ಮುಖ್ಯಶಿಷ್ಯರಲ್ಲಿ **ಪುಂಡರೀಕಾಕ್ಷರೇ** ಅಗ್ರಗಣ್ಯರು. ಗುರುಗಳೇ ಶಿಷ್ಯನನ್ನು ಉಯ್ಯಕೊಂಡಾರ್ ಎಂದು ಕರೆದರು. ನಾಥಮುನಿಗಳ ಮೊಮ್ಮಗನಾದ ಯಾಮುನರಿಗೆ ಪುಂಡರೀಕಾಕ್ಷರು ಪ್ರೋತ್ಸಾಹಕರಾದರು; ಇವರ ಶಿಷ್ಯರಾದ ಮಣಕ್ಕಾಲ್ ಊರಿನ ನಂಬಿ ಅಥವಾ **ರಾಮಮಿಶ್ರರೇ** ಯಾಮುನರ ನಿಜವಾದ ಆಧ್ಯಾತ್ಮಿಕ ಗುರು. ಇವರಿಬ್ಬರೂ ಶ್ರೀವೈಷ್ಣವ ಸಂಪ್ರದಾಯದ ತತ್ತ್ವಗಳನ್ನು ಕಲಿಸಿಹಾಕಿ ಜನರ ದಯೆ, ಗೌರವಗಳನ್ನು ಸಂಪಾದಿಸಿದರು. ಶ್ರೀವೈಷ್ಣವರು ಸರ್ವಸೃಷ್ಟಿಕರ್ತನಾದ **ನಾರಾಯಣನನ್ನು** ಮಾತ್ರ ಪೂಜಿಸಬೇಕೆಂದೂ, ಐಹಿಕ ಸುಖ ಆಸೆಗಳ ಪೂರ್ತಿಗಾಗಿ ಇತರ ಸಣ್ಣಪುಟ್ಟ ದೇವ-ದೇವತೆಗಳ ಪೂಜೆಯನ್ನು ಮಾಡಬಾರದೆಂದೂ, ಪ್ರಚಾರದ ಮಾಡಿದರು. ಧಾರ್ಮಿಕ ಶಿಕ್ಷಣಕ್ಕೆ ಅಧಿಕಾರವಿಲ್ಲದಿದ್ದ ಸನ್ನಿವೇಶದಲ್ಲಿ ಕೆಳಜಾತಿಯವರನ್ನೂ ಈ ಪಂಥಕ್ಕೆ ಸೇರಿಸಿಕೊಂಡು, ಪ್ರಪತ್ತಿ, ಪ್ರಬಂಧಪಾರಾಯಣಗಳ ಮೂಲಕ, ಅವರಿಗೆ ಪರಮಾತ್ಮನನ್ನು ಅರಿತುಕೊಳ್ಳುವ ಹಾಗೂ ಮುಕ್ತಿಯನ್ನು ಪಡೆಯುವ ಹಕ್ಕು ಕೊಡಲಾಯಿತು. ಹೀಗೆ ಶ್ರೀವೈಷ್ಣವ ಪಂಥವು ಇಬ್ಬಗೆಯ ಪ್ರಭಾವ ಬೀರಿತು.

ನಾಥಮುನಿಗಳ ಮೊಮ್ಮಗನಾದ **ಯಾಮುನಾಚಾರ್ಯ**ರಿಗೆ ಪುಂಡರೀಕಾಕ್ಷರ ಶಿಷ್ಯ ರಾಮಮಿಶ್ರರಿಂದ ವೇದಾಧ್ಯಯನ, ಸಂಸ್ಕೃತ ಶಿಕ್ಷಣ ಸಿಕ್ಕಿತು. ಬಹುಬುದ್ಧಿವಂತ, ಬಹುವಾದ ಜ್ಞಾಪಕಶಕ್ತಿ ಉಳ್ಳವ. ಅಲ್ಪಕಾಲ ರಾಜಭೋಗ ಜೀವನವನ್ನು ನಡೆಸಿದರೂ, ಸಂನ್ಯಾಸಿಗಳಾಗಿ ಆಧ್ಯಾತ್ಮಿಕ ಜೀವನವನ್ನು ಅಪ್ಪಿದರು. ಶ್ರೀರಂಗದ ಆಚಾರ್ಯಪೀಠದ ಮುಖ್ಯಸ್ಥರಾಗಿ, ರಂಗನಾಥ

ಸ್ವಾಮಿ ದೇವಾಲಯದ ಅಧಿಕಾರಿಯಾಗಿ, ಜ್ಞಾನ-ಭಕ್ತಿ-ವೈರಾಗ್ಯಪರರಾದ ಯಾಮುನ ಅಥವಾ ಆಳವಂದಾರರು ಶ್ರೇಷ್ಠ ಧರ್ಮಗ್ರಂಥಗಳನ್ನು ರಚಿಸಿ, ವಿಶಿಷ್ಟಾದ್ವೈತ ತತ್ತ್ವಗಳನ್ನು ಪ್ರತಿಪಾದಿಸುತ್ತಿದ್ದರು. ದೇವಾಲಯದಲ್ಲಿನ ಪೂಜೆ, ಸೇವೆ, ಉತ್ಸವ, ಗಾಯನ, ಜಾತ್ರೆಗಳಿಂದ ಶ್ರೀರಂಗವು ಬಲವಾದ ಶ್ರೀವೈಷ್ಣವ ಮತದ ಕೇಂದ್ರವಾಯಿತು. ಸಂಸ್ಕೃತದಲ್ಲಿ ಯಾಮುನರು ಶ್ರೇಷ್ಠ ಕವಿ, ವೇದಾಂತಿ ಎನಿಸಿದ್ದರು. ಶ್ರೀವೈಷ್ಣವ ಸಿದ್ಧಾಂತ ದರ್ಶನದ ನಿರ್ವಹಣೆಗೆ ಸಮರ್ಥರಾದ ಉತ್ತರಾಧಿಕಾರಿಯನ್ನು ದೊರಕಿಸಿಕೊಡುವಂತೆ ಕಂಚಿಯ ವರದರಾಜ ಸ್ವಾಮಿಯನ್ನೂ, ಶ್ರೀರಂಗದ ರಂಗನಾಥಸ್ವಾಮಿಯನ್ನು ಪ್ರಾರ್ಥಿಸುತ್ತ ಯಾಮುನರು ಕಾಲಕಳೆದರು.

ಹೀಗೆ ಭಗವದ್ವಿರಹದ ದಿವ್ಯಪ್ರಬಂಧ, ಆಳ್ವಾರರುಗಳ ಹಾಡುಗಳಲ್ಲಿ ಪ್ರವಹಿಸಿ, ರಾಮಾನುಜಾಚಾರ್ಯರಿಂದ ಪ್ರಚಾರಿತವಾಗಿರುವ ವಿಷ್ಣುಭಕ್ತಿಯು ಭಾರತದಲ್ಲೆಲ್ಲ ಹರಡಿದೆ. ಆಳ್ವಾರರುಗಳ ನಂತರ ಬಂದ ಶ್ರೀವೈಷ್ಣವ ಆಚಾರ್ಯರು ಸಂಸ್ಕೃತದ, ಉಪನಿಷತ್ತಿನ ಅರಿವುಳ್ಳ ವೈದಿಕರ ವೇದಾಂತ ಶಾಸ್ತ್ರಜ್ಞಾನ ಸಂಪ್ರದಾಯ ಹಾಗೂ ಆಳ್ವಾರರುಗಳ ಭಕ್ತಿ ಸಂಪ್ರದಾಯ ಎರಡಕ್ಕೂ ಸಾಮರಸ್ಯವನ್ನುಂಟುಮಾಡಿ ಆ ಮೂಲಕ ಪರಸ್ಪರ ಬೇರ್ಪಟ್ಟ ದೇವ-ಜೀವರುಗಳನ್ನು ಒಂದುಗೂಡಿಸಲೆತ್ನಿಸಿದರು.

ಯಾಮುನಾಚಾರ್ಯರಿಂದ ಬೆಳೆದುಬಂದ ವಿಶಿಷ್ಟಾದ್ವೈತ ಪಂಥಕ್ಕೆ ಶ್ರೀರಂಗ, ಕಂಚಿ, ತಿರುಪತಿಗಳು ಕೇಂದ್ರಗಳಾಗಿದ್ದವು. ಆದರೆ ಯಾಮುನರ ಸ್ಥಳವನ್ನು ಭರ್ತಿಮಾಡಲು ವಿಜ್ಞಾನಿಸ, ಅತ್ಯಂತ ಯೋಗ್ಯರಾದ ರಾಮಾನುಜರೇ ಸರಿಯೆಂದು ಭಾವಿಸಿದ್ದರೂ, ಆ ಸಂಕಲ್ಪ ಸಿದ್ಧಿಯಂತಾಗಲಿ ಎಂದು ಯತ್ನವಾಗಲಿಲ್ಲ. ರಾಮಾನುಜರಿಗೆ ಯಾಮುನಾಚಾರ್ಯರಿಂದ ನೇರವಾಗಿ ಉಪದೇಶ ಲಭ್ಯವಾಗದಿದ್ದರೂ, ಯಾಮುನರ ಜ್ಞಾನಾನುಭವದ ಒಂದೊಂದು ಮುಖವನ್ನು ಪಡೆದಿದ್ದ ಅವರ ಬಳಿಯಿದ್ದ ಆಪ್ತಶಿಷ್ಯರಿಂದ ಉಪದೇಶ ದೊರಕಿತು. ಆ ಮೂಲಕ ಯಾಮುನರ ಅನುಗ್ರಹ ಪೂರ್ಣಕಟಾಕ್ಷವಾಯಿತು. ಕಂಚಿಯ ವರದರಾಜಸ್ವಾಮಿಯ ಅಂತರಂಗಭಕ್ತರೂ, ಜ್ಞಾನಿಯೂ ಆದ

ಕಾಂಚೀಪೂರ್ಣರನ್ನು ಗುರುವಾಗಿ ಸ್ವೀಕರಿಸಿ ಕೃತಾರ್ಥರಾದವರು; ತಿರುಮಾಲೆ ಯಾಂಡಾನ್ ಅವರಿಂದ ನಮ್ಮಾಳ್ವಾರರ ದಿವ್ಯಪ್ರಬಂಧಗಳ ವಿಶೇಷಾರ್ಥಗಳನ್ನು ಕಲಿತರು. ಇದಲ್ಲದೆ ಅವರು ಶಠಕೋಪದಾಸ ಎನ್ನಿಸಿಕೊಂಡ ಮಹಾಪೂರ್ಣರಿಂದ ಪ್ರಬಂಧೋಪದೇಶವನ್ನು ಮತ್ತು ವಿಶಿಷ್ಟಾದ್ವೈತ ತತ್ತ್ವದ ರಹಸ್ಯವನ್ನು ಕಲಿತು; ತಿರುಮಲೈ ನಂಬಿ ಎನಿಸಿದ ಶ್ರೀಶೈಲಪೂರ್ಣರಿಂದ ರಾಮಾಯಣದ ಗೂಢಾರ್ಥಗಳನ್ನು ತಿಳಿದುಕೊಂಡರು. ತಿರುಕ್ಕೋಟ್ಟಿಯೂರ್ ನಂಬಿ ಎನಿಸಿದ ಗೋಷ್ಠೀಪೂರ್ಣರಿಂದ ಮಂತ್ರರತ್ನಗಳ ರಹಸ್ಯಾರ್ಥವನ್ನು ಬಹಳ ಪ್ರಯಾಸದಿಂದ ಅರಿತುಕೊಂಡರು. ಹೀಗೆ ಬೇರೆ ಬೇರೆ ಆಚಾರ್ಯರಿಂದ ಸಿದ್ಧಾಂತದ ಬೇರೆ ಬೇರೆ ರಹಸ್ಯವನ್ನು ಬೇರೆ ಬೇರೆ ರೀತಿಯಲ್ಲಿ ಕಲಿತುಕೊಂಡು ಎಲ್ಲವನ್ನೂ ತಮ್ಮ ಅಸಾಧಾರಣ ಪ್ರತಿಭೆಯಿಂದ ಸ್ವೀಕರಿಸಿಕೊಂಡು, ಶಿಷ್ಯರ ರಕ್ಷಣೆ, ಪ್ರಕಾರಗಳನ್ನು ತಿಳಿದು ಅಪಾರವಾದ ಶಕ್ತಿ ಸಾಮರ್ಥ್ಯಗಳನ್ನು ಸಂಪಾದಿಸಿಕೊಂಡರು. ತತ್ತ್ವ, ಹಿತ, ಪುರುಷಾರ್ಥಗಳನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಇವು ವಿಶಿಷ್ಟಾದ್ವೈತದ ಪ್ರತಿಪಾದನೆಗೆ, ಭಕ್ತಿಪ್ರಪತ್ತಿಯ ಆದರ್ಶ ಕೀರ್ತಿಗೆ ಕಾರಣ ಸ್ಪಷ್ಟ ನೆಲೆ ಒದಗಿಸಿದವು.

ಹೀಗೆ ಸಂಕ್ಷಿಪ್ತರೂಪದ ವೇದವ್ಯಾಸರಿಂದ ಸೂತ್ರರೂಪದಲ್ಲಿ ಉಕ್ತವಾಗಿ, ಬೋಧಾಯನ, ಟಂಕ, ದ್ರಮಿಡ, ನಾಥಮುನಿ, ಯಾಮುನಾಚಾರ್ಯ ಮುಂತಾದವರಿಂದ ಸಂಗ್ರಹವಾಗಿ ವಿವೃತವಾದುದನ್ನು ಯಾಮುನಾಚಾರ್ಯರ ಬಳಿಕ ಪ್ರಸಿದ್ಧರಾದ ರಾಮಾನುಜಾಚಾರ್ಯರು ತಾರ್ಕಿಕವಾಗಿ, ವಿಸ್ತೃತವಾಗಿ ಪ್ರತಿಪಾದಿಸಿರುವುದರಿಂದ ಇದನ್ನು ‘ರಾಮಾನುಜಸಿದ್ಧಾಂತ’ ‘ರಾಮಾನುಜ ದರ್ಶನ’ ಎಂದೇ ಕರೆಯುತ್ತಾರೆ. ಆದರೆ ರಾಮಾನುಜರೇ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಧಾನ ಸ್ಥಾಪಕರು ಎಂದು ಹೇಳಲ್ಪಟ್ಟಿದ್ದಾರೆ.

ಭಾರತದಲ್ಲಿ ಸಂತರೂ ಇತಿಹಾಸ ನಿರ್ಮಾಪಕರು ಎನ್ನಲು ರಾಮಾನುಜರ ಜೀವನ-ಕೆಲಸಗಳು ಸಾಕ್ಷಿಯಾಗಿ ನಿಂತಿವೆ. ರಾಮಾನುಜರು ಪ್ರಾಚೀನ ಋಷಿ ಪರಂಪರೆಗೆ ಸೇರಿದ್ದರೂ ಕಾಲ ದೇಶಗಳಿಗೆ ಅನುಗುಣವಾಗಿದ್ದರು,

[illegible]ನಪ್ರಧಾನನಾದ ಅದ್ವೈತ ಮತದ ಗುರುಗಳಾದ **ಯಾದವಪ್ರಕಾಶರಲ್ಲಿ** ಕಲಿತರೂ ವೇದಾಂತ, ಉಪನಿಷತ್ತುಗಳ ಅರ್ಥದ ಬಗ್ಗೆ ಗುರು ಶಿಷ್ಯರಲ್ಲಿ ಭಿನ್ನಾಭಿಪ್ರಾಯ ಬಂದಾಗ, ಭಕ್ತಿ-ಪ್ರೇಮ **ಪ್ರಧಾನವಾದ** ವಿಶಿಷ್ಟಾದ್ವೈತ ಮತದ ಶ್ರೇಷ್ಠತೆಯನ್ನು ಎತ್ತಿತೋರಿಸಿ, ಗುರುಗಳನ್ನೇ ಶಿಷ್ಯರಾಗಿಸಿದ ಮಹಾಮಹಿಮರು. ಬೌದ್ಧ ಗ್ರಂಥಗಳನ್ನು ಅಧ್ಯಯನ ಮಾಡಿ, **ಅ**ನೇಕ ಜೈನ [illegible]ರನ್ನು ಶ್ರೀವೈಷ್ಣವರನ್ನಾಗಿ ಮಾಡಿದರು.

[illegible] ಅಚಾರ್ಯೇ ನ್ಯಾಪಯುಕ್ತ ಓ
[illegible] ರಾಮಾನುಜಾರ್ಯ ಉಚ್ಯತೇ ''

[illegible] ಗ್ರಂಥಗಳನ್ನು ಬರೆದು [illegible]ರಿಸಿದ ಪ್ರಸ್[illegible] ತಮ್ಮ [illegible] ತಕ್ಕ ಆಧಾರವಾಗಿ ಸಂಸ್ಕೃತ, ತಮಿಳು, [illegible] ಪ್ರಮಾಣ ಗ್ರಂಥಗಳನ್ನು ನಿರ್ಮಾಣಮಾಡಿ [illegible] ವೇದಾಂತ ಮತ್ತು ಆಳ್ವಾರರುಗಳ [illegible] ಪ್ರತಿಪಾದಿಸಿ ಉಭಯ [illegible] ಧಾರ್ಮಿಕ ಪ್ರವಾಸ ಹೊರಟು [illegible], ಮಧುರೆ, ತಿರುನೆಲ್ಲಿ, ಆಳ್ವಾರ್ ತಿರುನಗರಿ [illegible], ದ್ವಾರಕೆ, ಮಥುರ, ಅಯೋಧ್ಯೆ, ಪ್ರಯಾಗ, ಬದರೀನಾಥ, ಶ್ರೀನಗರ, ಗಯಾ[illegible] ತಿರುಪತಿ, ಕಂಚಿ, ತಿರುಕ್ಕೋಯಿಲೂರ್, ತಿರು-[illegible], [illegible], ತೊಂಡನೂರು, [illegible] ಮುಂತಾದ ಪವಿತ್ರ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ, ಭಗವನ್ನಾಮವನ್ನು [illegible]. ಅಪಾರ ಶಿಷ್ಯರನ್ನು ಪಡೆದು [illegible] ಮಠಗಳ ಸ್ಥಾಪನೆಗೆ, [illegible] ನಿರ್ಮಾಣಕ್ಕೆ, ಮತ್ತು ಅವುಗಳನ್ನು ಸಾಮಾಜಿಕ-ಧಾರ್ಮಿಕ ಕೇಂದ್ರಗಳಾಗಿಸಲು, ಶ್ರಮಿಸಿದ ಧರ್ಮ ಪ್ರಚಾರಕ, ಅಧ್ಯಾತ್ಮಿಕ ಸಾಧನೆಗೆ ಹಾಗೂ ಮತಪ್ರಚಾರಕ್ಕೆ ಅದ್ವಿತೀಯರಾಗಿದ್ದು [illegible] ಜೀವನವನ್ನು [illegible] ಮತ್ತು ಲೋಕದ ಉದ್ಧಾರಕ್ಕೆ [illegible] ಸಂನ್ಯಾಸ [illegible] ಮಹಾತ್ಮರಾಗಿ.

ಕಾಂಚೀಪೂರ್ಣರನ್ನು ಗುರುವಾಗಿ ಸ್ವೀಕರಿಸಿ ಸನ್ಯಾಸಿಯಾದರು; ತಿರುಮಾಲೆಯಾಂಡಾನ್ ಅಥವಾ ಮಾಲಾಧರರಿಂದ ದಿವ್ಯಪ್ರಬಂಧಗಳ ವಿಶೇಷಾರ್ಥಗಳನ್ನು ಕಲಿತರು. ಪೆರಿಯನಂಬಿ ಅಥವಾ ಪರಾಂಕುಶದಾಸ ಎನ್ನಿಸಿಕೊಂಡ ಮಹಾಪೂರ್ಣರಿಂದ ದ್ವಯಮಂತ್ರೋಪದೇಶವನ್ನು ಮತ್ತು ವಿಶಿಷ್ಟಾದ್ವೈತ ತತ್ತ್ವದ ರಹಸ್ಯವನ್ನು ಕಲಿತರು; ತಿರುಮಲೈನಂಬಿ ಅಥವಾ ಶ್ರೀಶೈಲಪೂರ್ಣರಿಂದ ರಾಮಾಯಣದ ಗೂಢಾರ್ಥವನ್ನು ತಿಳಿದುಕೊಂಡರು; ತಿರುಕ್ಕೋಟಿಯೂರ್ ನಂಬಿ ಅಥವಾ ಗೋಷ್ಠೀಪೂರ್ಣರಿಂದ ಮಂತ್ರರತ್ನಗಳ ರಹಸ್ಯಾರ್ಥವನ್ನು ಬಹಳ ಶ್ರಮಪಟ್ಟು ಅರಿತುಕೊಂಡರು. ಹೀಗೆ ಬೇರೆ ಬೇರೆ ಆಚಾರ್ಯರಿಂದ ವಿಶಿಷ್ಟಾದ್ವೈತದ ಒಂದೊಂದು ರಹಸ್ಯವನ್ನು ಒಂದೊಂದು ರೀತಿಯಲ್ಲಿ ಪಡೆದುಕೊಂಡರು. ಅವನ್ನೆಲ್ಲಾ ತಮ್ಮ ಅನುಷ್ಠಾನಾದಿಗಳಿಂದ ದೃಢಪಡಿಸಿಕೊಂಡು, ಸಿದ್ಧಾಂತದ ರಕ್ಷಣೆ, ಪ್ರಚಾರಗಳನ್ನು ಕೈಗೊಳ್ಳಲು ಅವಶ್ಯವಾದ ಶಕ್ತಿ ಸಾಮರ್ಥ್ಯಗಳನ್ನು ಸಂಪಾದಿಸಿಕೊಂಡು, 'ತತ್ತ್ವ, ಹಿತ, ಪುರುಷಾರ್ಥ'ಸ್ವರೂಪವನ್ನು ಹೃದಯಂಗಮವಾಗಿ ನಿರೂಪಿಸಿದ್ದಾರೆ. ಇವರ ಆಪ್ತಶಿಷ್ಯರೂ, ಪ್ರತಿಭಾವಂತರೂ, ಭಕ್ತಾಗ್ರೇಸರರೂ ಆದ ಕೂರೇಶ, ದಾಶರಥಿ ಇಬ್ಬರ ಸೇವೆ ಅಸದೃಶವಾದುದು.

ಹೀಗೆ ವಿಸ್ತೃತರೂಪದ ವೇದವ್ಯಾಸರಿಂದ ಸೂತ್ರರೂಪದಲ್ಲಿ ಉಕ್ತವಾಗಿ, ಬೋಧಾಯನ, ಟಂಕ, ದ್ರಮಿಡ, ನಾಥಮುನಿ, ಯಾಮುನಾಚಾರ್ಯ ಮುಂತಾದವರುಗಳಿಂದ ಸಂಗ್ರಹವಾಗಿ ವಿವೃತವಾದುದನ್ನು ಯಾಮುನಾಚಾರ್ಯರ ಶಿಷ್ಯಗಳ ಮಗನಾದ ರಾಮಾನುಜಾಚಾರ್ಯರು ತಾರ್ಕಿಕವಾಗಿ, ಸುವ್ಯವಸ್ಥಿತರೂಪದಲ್ಲಿ ಪ್ರತಿಪಾದಿಸಿದುದರಿಂದ ಇದನ್ನು 'ರಾಮಾನುಜಸಿದ್ಧಾಂತ' 'ರಾಮಾನುಜ ದರ್ಶನ' ಎಂದೇ ಕರೆಯುತ್ತಾರೆ. ಆದರೆ ರಾಮಾನುಜರೇ ವಿಶಿಷ್ಟಾದ್ವೈತಸಿದ್ಧಾಂತದ ನಿಜವಾದ ಸ್ಥಾಪಕರು ಎಂದು ಹೇಳಲಡ್ಡಿಯಿಲ್ಲ.

ಭಾರತದಲ್ಲಿ ಸಂತರೂ ಇತಿಹಾಸ ನಿರ್ಮಾಪಕರು ಎನ್ನಲು ರಾಮಾನುಜರ ಜೀವನ-ಕೆಲಸಗಳು ಸಾಕ್ಷಿಯಾಗಿ ನಿಂತಿವೆ. ರಾಮಾನುಜರು ಪ್ರಾಚೀನ ಋಷಿ ಪರಂಪರೆಗೆ ಸೇರಿದ್ದರೂ ಕಾಲ ದೇಶಗಳಿಗೆ ಅನುಗುಣವಾಗಿದ್ದರು,

ಜ್ಞಾನಪ್ರಧಾನವಾದ ಅದ್ವೈತ ಪಂಥದ ಗುರುಗಳಾದ **ಯಾದವಪ್ರಕಾಶರಲ್ಲಿ** ಕಲಿತರೂ, ವೇದಾಂತ, ಉಪನಿಷತ್ತುಗಳ ಅರ್ಥದ ಬಗ್ಗೆ ಗುರು-ಶಿಷ್ಯರಲ್ಲಿ ಭಿನ್ನಾಭಿಪ್ರಾಯ ಬಂದಾಗ, ಭಕ್ತಿ-ಪ್ರೇಮ ಪ್ರಧಾನವಾದ ವಿಶಿಷ್ಟಾದ್ವೈತ ಪಂಥದ ಶ್ರೇಷ್ಠತೆಯನ್ನು ಎತ್ತಿತೋರಿಸಿ, ಗುರುಗಳನ್ನೇ ಶಿಷ್ಯರಾಗಿಸಿದ ಮಹಾಮಹಿಮರು. ಬೌದ್ಧಗ್ರಂಥಗಳನ್ನೂ ಅಧ್ಯಯನ ಮಾಡಿ, ಅನೇಕ ಜೈನ-ಬೌದ್ಧರನ್ನು ಶ್ರೀವೈಷ್ಣವರನ್ನಾಗಿ ಮಾಡಿದರು.

" ಆಚಿನೋತಿ ಹಿ ಶಾಸ್ತ್ರಾರ್ಥಾನ್ ಆಚಾರೇ ಸ್ಥಾಪಯತ್ಯಪಿ |
ಸ್ವಯಮಾಚರತೇ ಯಸ್ಮಾತ್ ತಸ್ಮಾದಾಚಾರ್ಯ ಉಚ್ಯತೇ "

ಎಂಬಂತೆ ಉಪದೇಶದ ಜೊತೆಗೆ ಅನುಷ್ಠಾನವನ್ನೂ ಮಾಡಿ ತೋರಿಸಿದ ಶ್ರೇಷ್ಠ ಆಚಾರ್ಯರು. ತಮ್ಮ ಸಿದ್ಧಾಂತಕ್ಕೆ ಆಧಾರವಾಗಿ ಸಂಸ್ಕೃತ, ತಮಿಳು ಎರಡು ಭಾಷೆಗಳಲ್ಲಿಯೂ ಪ್ರಮಾಣ ಗ್ರಂಥಗಳನ್ನು ನಿರ್ಮಾಣಮಾಡಿ ಭಾಷ್ಯಕಾರ ಎನಿಸಿಕೊಂಡರು. ಸಂಸ್ಕೃತವೇದಾಂತ ಮತ್ತು ಆಳ್ವಾರರುಗಳ ದ್ರಾವಿಡ ಪ್ರಬಂಧ ಎರಡೂ ಸಮಾನಪ್ರಮಾಣವು ಎಂದು ಪ್ರತಿಪಾದಿಸಿ ಉಭಯ ವೇದಾಂತ ಪ್ರವರ್ತಕ ಎಂಬುದನ್ನು ಸ್ಪಷ್ಟಪಡಿಸಿದರು. ಧಾರ್ಮಿಕ ಪ್ರವಾಸ ಹೊರಟು ಕುಂಭಕೋಣ, ಮಧುರೆ, ತಿರುನೆಲ್ಲಿ, ಆಳ್ವಾರ್‌ತಿರುನಗರಿ ರಾಮೇಶ್ವರ, ದ್ವಾರಕೆ, ಮಥುರ, ಅಯೋಧ್ಯೆ, ಪ್ರಯಾಗ, ಬದರೀನಾಥ, ಶ್ರೀನಗರ, ಜಗನ್ನಾಥ, ತಿರುಪತಿ. ಕಂಚಿ, ತಿರುಕ್ಕೋಯಿಲೂರ್, ತಿರು-ಮಹೇಂದ್ರಪುರ, ವೀರನಾರಾಯಣಪುರ, ಮೇಲುಕೋಟೆ, ತೊಂಡನೂರು, ಸಾಲಿಗ್ರಾಮ, ರಾಮನಾಥಪುರ ಮುಂತಾದ ಪವಿತ್ರ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ, ಭಗವತ್ಸೇವೆಯನ್ನು ಮಾಡಿ, ಅಪಾರ ಶಿಷ್ಯರನ್ನು ಪಡೆದು ಅಲ್ಲಿ ಮಠಗಳ ಸ್ಥಾಪನೆಗೆ, ದೇವಾಲಯಗಳ ನಿರ್ಮಾಣಕ್ಕೆ, ಮತ್ತು ಅವುಗಳನ್ನು ಸಾಮಾಜಿಕ-ಧಾರ್ಮಿಕ ಕೇಂದ್ರಗಳಾಗಿಸಲು, ಶ್ರಮಿಸಿದ ಧರ್ಮ ಪ್ರಚಾರಕ, ಆಧ್ಯಾತ್ಮಿಕ ಸಾಧನೆಗೆ ಹಾಗೂ ಮತಪ್ರಚಾರಕ್ಕೆ ಅಡ್ಡಿಯಾಗಿದ್ದ ಗೃಹಸ್ಥ ಜೀವನವನ್ನು ತ್ಯಜಿಸಿ, ಆತ್ಮ ಮತ್ತು ಲೋಕದ ಉದ್ಧಾರಕ್ಕೆ ಅವಶ್ಯವಾದ ಸಂನ್ಯಾಸ ಸ್ವೀಕಾರ ಮಾಡಿದ ಮಹಾತ್ಮಾಗಿ.

ಜಾತಿಕುಲಗಳಿಗಿಂತ ಭಕ್ತಿ, ಸರ್ವಮತಸಮಾನತೆ, ಸಮಾಜದ ಹಿತ ಚಿಂತನೆ ಮುಖ್ಯವೆಂದು ಹೇಳಿ, ನಿಜವಾದ ಧರ್ಮಮಾರ್ಗದಿಂದ ಯಾವುದೇ ವ್ಯಕ್ತಿಯನ್ನು, ಅವನ ಜನ್ಮ, ಜಾತಿ, ಕುಲ, ಗೋತ್ರಗಳ ನೆಪದಲ್ಲಿ, ದೂರವಿಡುವುದು ಅನ್ಯಾಯ ಎಂದು ಬೋಧಿಸಿ, ವಿಷ್ಣುವಿನ ದೇವಾಲಯಗಳಲ್ಲಿ ಮೇಲು-ಕೀಳೆನ್ನದೆ ಹರಿಜನರ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟು, ಅವರನ್ನು ತಿರುಕ್ಕುಲತ್ತಾರ್ ಎಂದು ಕರೆದ ಸಮಾಜಸುಧಾರಕರು. ಉಚ್ಚ ಕುಲಗಳ ಸಾಂಪ್ರದಾಯಿಕ ಪ್ರತಿಬಂಧಕಗಳನ್ನು ಉಳಿಸಿಕೊಂಡೂ ಸಹ ಸ್ವರ್ಗದ ಬಾಗಿಲು ಮತ್ತು ಮುಕ್ತಿಗಳನ್ನು ಕೀಳು ಜಾತಿಯವರಿಗೂ ತೆರೆದಿಡಲು ಶ್ರಮಿಸಿದ ದೀನಬಂಧು. ದೇವರು ನಮ್ಮೆಲ್ಲರ ತಂದೆ, ಲಕ್ಷ್ಮಿಯು ನಮ್ಮ ತಾಯಿ, ಮಾನವರೆಲ್ಲ ಅಣ್ಣತಮ್ಮಂದಿರು, ಭಗವಂತನನ್ನು ನಂಬಿ ಅವನಲ್ಲಿ ಪೂರ್ಣವಾಗಿ ಶರಣು ಹೊಕ್ಕವರಿಗೆ ಮುಕ್ತಿಯು ದೊರತೇ ದೊರೆಯುತ್ತದೆ ಎಂದು ಸಾರಿದ ಯತಿರಾಜ. ಅನಾದಿ ಹಾಗೂ ಅನಂತ ಆದ ಭಕ್ತಿ ಪರಂಪರೆಯ ಉತ್ಕೃಷ್ಟತೆಯನ್ನು ಜಗತ್ತಿಗೆ ಸಾರಿದುದಲ್ಲದೆ ಅದನ್ನು ಜ್ಞಾನದ ಪೀಠದ ಮೇಲೆ ಶಾಶ್ವತವಾಗಿ ಕುಳ್ಳಿರಿಸಿದ ಅಂದರೆ ಜ್ಞಾನ, ಭಕ್ತಿ, ವೈರಾಗ್ಯಗಳ ಸಾಮರಸ್ಯಗಳನ್ನು ಸ್ಥಾಪಿಸಿ, ವ್ಯಕ್ತಿಶೀಲದೊಂದಿಗೆ ವಿಶ್ವ ಕಲ್ಪನೆಯನ್ನು ಬೋಧಿಸಿದ ದಿವ್ಯಾತ್ಮ. ಬುದ್ಧಿ – ಹೃದಯ, ಆದರ್ಶ–ಯಥಾರ್ಥ, ಇಹ-ಪರ, ಈ ಎಲ್ಲದರ ಮಧುರ ಸಮನ್ವಯವನ್ನು ಸಾಧಿಸಿ, ಇಂದ್ರಿಯ ಹಾಗೂ ಆತ್ಮ ಕಲ್ಯಾಣಗಳಿಗೆ ನೆರವಾಗಿ ಎಲ್ಲರ ಅನುಭವಕ್ಕೂ ನಿಲುಕುವ ಸಿದ್ಧಾಂತವನ್ನು ಸ್ಥಾಪಿಸಿದ ನೇತಾರ.

ಅತ್ಯಪೂರ್ವವಾದ ಜ್ಞಾನ ಭಕ್ತಿ–ವೈರಾಗ್ಯ,–ಭವ್ಯಹಾಗೂ ಉದಾರವಾದ ಸಮನ್ವಯ ದೃಷ್ಟಿ, ಕಣ್ಣಿಗೆ ಕಾಣಿಸಿಕೊಂಡವರೆಲ್ಲರನ್ನೂ ಸಲಹಬೇಕೆಂಬ ಕರುಣಾರ್ದ್ರಹೃದಯ, ನಿಜವಾದ ತತ್ತ್ವಸ್ವರೂಪವನ್ನು ಉಪದೇಶಿಸಿ ಜನರ ವಿಪರೀತ ವೃತ್ತಿಯನ್ನು ತಡೆಯಬೇಕೆಂಬ ಉತ್ಕಟೇಚ್ಛೆ, ಶಿಥಿಲವಾದ ವಿಶಿಷ್ಟಾದ್ವೈತ ಸಂಪ್ರದಾಯ ಹಾಗೂ ಶ್ರೀವೈಷ್ಣವ ಸಮಾಜಗಳನ್ನು ಸಂಘಟನೆ ಮಾಡಬೇಕೆಂಬ ದೃಢಸಿರ್ಧಾರ, ಎಂಥವರ ಹೃದಯವನ್ನೂ ಪರಿವರ್ತನಗೊಳಿಸಬಲ್ಲ ಸಹಜ–ಸುಂದರ–ಗಂಭೀರ ವಾಕ್ಸಂಪತ್ತು, ಪತಿತೋದ್ಧ

ಹಾಗೂ ನಿಷ್ಕಪಟ ವ್ಯಕ್ತಿಜೀವನ – ಇವು ಮುಖ್ಯವಾಗಿ ಆಚಾರ್ಯ ರಾಮಾನುಜರ ವೈಶಿಷ್ಟ್ಯ. ಸಂಗ್ರಹಣ, ಸಂಸ್ಕರಣ ಸ್ಥಿರೀಕರಣ ಮತ್ತು ಪ್ರಸರಣ ಇವೇ ರಾಮಾನುಜರ ಗೆಲುವಿನ ಗುಟ್ಟು.

ತೋಳುಗಳಮೇಲೆ ಶಂಖ–ಚಕ್ರಮುದ್ರಾಧಾರಣೆ (ತಾಪ), ಮಸ್ತಕ, ಬಾಹು, ಶಿರ, ಕಂಠ, ಎದೆ, ಬೆನ್ನುಗಳಮೇಲೆ ವಿಷ್ಣುವಿನ ಚಿಹ್ನೆಯಾದ ದ್ವಾದಶ ನಾಮಧಾರಣೆ (ಪುಂಡ್ರ), ವಿಷ್ಣುವಿನ ಹೆಸರುಗಳಲ್ಲಿ ಒಂದನ್ನು ಇಟ್ಟು ಕೊಳ್ಳುವುದು (ನಾಮ, ದ್ವಯ–ಅಷ್ಟಾಕ್ಷರಿಮಂತ್ರ,–ಚರಮಶ್ಲೋಕಗಳ ಜಪ (ಮಂತ್ರ), ವಿಷ್ಣುವಿನ ಪೂಜೆ (ಯಾಗ)–ಇವು ಶ್ರೀವೈಷ್ಣವ ಧರ್ಮದ ಪಂಚ ಸಂಸ್ಕಾರಗಳು.

ಮೂಲ ಮಂತ್ರ ರತ್ನಗಳ ವಿವರ ಹಾಗೂ ವಿಶದ–ಆದ ಅರ್ಥವನ್ನು ಕಾಲಕ್ಷೇಪದಲ್ಲಿ ಆಚಾರ್ಯರಿಂದಲೇ ತಿಳಿದುಕೊಂಡು ಅವುಗಳನ್ನು ಅನು ಸಂಧಾನ ಮಾಡುವುದು ಒಳ್ಳೆಯದು.

ಶ್ರೇಯಸ್ಸಿಗೆ ಸಾಧಕವಾದ ಧಾರ್ಮಿಕ ತತ್ವಗಳನ್ನು ಜನರಿಗೆ ಬೋಧಿಸಿ ಅವರನ್ನು ಕೃತಾರ್ಥರನ್ನಾಗಿ ಮಾಡಬೇಕೆಂಬ ಮಹತ್ತರವಾದ ಆಕಾಂಕ್ಷೆಯೇ ಮಠಗಳಿಗೆ ಮೂಲ. ಶ್ರೀರಾಮಾನುಜಾಚಾರ್ಯರು ಮತಪ್ರಚಾರಕ್ಕಾಗಿ ನಾಡಿನಾದ್ಯಂತ ಸ್ಥಾಪಿಸಿದ ಮಠ ಪೀಠಗಳಲ್ಲಿ 74 ಜನ ಸಿಂಹಾಸನಾಧಿಪತಿಗಳಿದ್ದರು. ಅವರೆಲ್ಲರೂ ಪ್ರಸಿದ್ಧ ಆಚಾರ್ಯಪುರುಷರೆನ್ನಿಸಿಕೊಂಡು ರಾಮಾನುಜರು ಮಾಡಿದಂತೆ ತಮ್ಮ ತಮ್ಮ ಶಿಷ್ಯ–ಪ್ರಶಿಷ್ಯರಿಗೆ ಪಂಚಸಂಸ್ಕಾರಗಳನ್ನು ಜಾತಿ ಭೇದವಿಲ್ಲದೆ ನೀಡಿ ಎಲ್ಲರೂ ಶ್ರೀವೈಷ್ಣವ ಮತಾನುಯಾಯಿಗಳಾಗಲು ನೆರವಾದರು. ಅಪಾರ ಗ್ರಂಥ ನಿರ್ಮಿಸಿ, ಆಮೇಲೆ ಬಂದ ಆಚಾರ್ಯರು ಶ್ರೀ ವೈಷ್ಣವ ಸಿದ್ಧಾಂತದ ಅಭಿವೃದ್ಧಿ, ಪ್ರಚಾರಕಾರ್ಯದಲ್ಲಿ ನಿರತರಾಗಿದ್ದರು.

ಈ ಸಿಂಹಾಸನಾಧೀಶರುಗಳಲ್ಲಿ ಒಬ್ಬರಾದ ರಾಮಮಿಶ್ರರು ರಾಮಾನುಜರ ಅನುಗ್ರಹ, ವಿಶ್ವಾಸಗಳಿಗೆ ಪಾತ್ರರಾಗಿದ್ದು, ಸೋಮಾಶಿಯಾಂಡಾನ್

ಪರಂಪರೆಯನ್ನು ಆರಂಭಿಸಿ ರಾಮಾನುಜ ಸಿದ್ಧಾಂತದ ಪ್ರಕಾಶಕ್ಕೆ ಹೆಚ್ಚು ನೆರವಾಗಿದ್ದಾರೆ. ಇವರಂತೆ **ತಾತಾಚಾರ್ಯರು**, ನಲ್ಲಾನ್ ಚಕ್ರವರ್ತಿಗಳು ಮುಂತಾದವರೂ ಸೇವೆಸಲ್ಲಿಸಿದ್ದಾರೆ. ಸೋಮಾಶಿಯಾಂಡಾನ್ ಪರಂಪರೆಯ **ಮೋಘನಾದಾರಿಸೂರಿ**ಯವರ ಅಭಿಪ್ರಾಯಗಳು ಅವರ ಸಮಕಾಲೀನರಾದ ವೇದಾಂತದೇಶಿಕರ ಹಾಗೂ ಪಿಳ್ಳೈಲೋಕಾಚಾರ್ಯರ ಅಭಿಪ್ರಾಯಗಳಿಗಿಂತ ಸ್ವಲ್ಪ ಬೇರೆಯಾಗಿವೆ.

ಆತ್ರೇಯ ರಾಮಾನುಜರ ತಂಗಿಯ ಮಗನಾದ **ವೆಂಕಟನಾಥರು** ಪೂರ್ವಾಚಾರ್ಯರಿಂದ ಹರಿದು ಬಂದ ಜ್ಞಾನಾನುಭವಗಳ ಪ್ರವಾಹಕ್ಕೆ ತಮ್ಮದನ್ನೂ ಸೇರಿಸಿ ಅವನ್ನು ಹಿಗ್ಗಿಸಿದರು. ಸತ್ಕುಲದಲ್ಲಿ ಜನನ, ಸದ್ವಿದ್ಯಾಭ್ಯಾಸ, ಸಚ್ಛಾಸ್ತ್ರಪ್ರವರ್ತನೆ, ಸಚ್ಛಿಷ್ಯಸಂಪತ್ತುಗಳನ್ನು ಹೊಂದಿದ್ದ ಇವರು ವೇದಾಂತದೇಶಿಕ, ನಾನಾ ಶಾಸ್ತ್ರ ಪ್ರವೀಣ, ಪ್ರೌಢಕಾವ್ಯಪ್ರಣೇತ, ಕವಿತಾರ್ಕಿಕಸಿಂಹ, ಜ್ಞಾನಭಕ್ತಿ ವಿನಯ ವೈರಾಗ್ಯ ಸಂಪನ್ನ ತಪಸ್ವಿ, ಸರ್ವತಂತ್ರ ಸ್ವತಂತ್ರ, ಶ್ರೀವೈಷ್ಣವ ಸಿದ್ಧಾಂತ ಪ್ರವರ್ತನದಕ್ಷ ಎನಿಸಿಕೊಂಡರು. ಅದ್ವೈತಪಂಥದ ವಿದ್ಯಾರಣ್ಯ ದ್ವೈತಪಂಥದ ಅಕ್ಷೋಭ್ಯತೀರ್ಥ ಇಬ್ಬರಲ್ಲಿ ಶಾಸ್ತ್ರವಾದ ನಡೆದಾಗ ವೆಂಕಟನಾಥರು ತೀರ್ಪುಗಾರರಾಗಿದ್ದರು. ವಿಜಯನಗರದ ವಿದ್ಯಾರಣ್ಯರ ಸಮಕಾಲೀನರಾಗಿದ್ದು, ಪರಸ್ಪರ ಸ್ನೇಹ-ಗೌರವಗಳನ್ನೂ ಹೊಂದಿದ್ದು, ಹಿಂದೂ ಧರ್ಮಕ್ಕೆ ಒದಗಿದ್ದ ಅಪಾಯ, ಭಯ ಪರಿಹಾರಕ್ಕಾಗಿ ಅವರೊಡನೆ ದುಡಿದವರು. ವಿದ್ಯಾರಣ್ಯರಂತೆ ರಾಜಕೀಯ ಸಾಮ್ರಾಜ್ಯಸ್ಥಾಪನೆಯಲ್ಲಿ ಪ್ರವೇಶಿಸದಿದ್ದರೂ, ಹಿಂದೂಧರ್ಮ ಸಾಮ್ರಾಜ್ಯಸ್ಥಾಪನೆಗೆ ಅವಶ್ಯವಾದ ಆಧ್ಯಾತ್ಮಿಕ ಶಕ್ತಿಯನ್ನು ಜಾಗೃತಗೊಳಿಸುವುದರಲ್ಲಿ ಅಮೋಘಸೇವೆ ಸಲ್ಲಿಸಿದರು. ವಿಸ್ತಾರವಾದ ಪಾಂಡಿತ್ಯ ಹಾಗೂ ಶಾಸ್ತ್ರನೈಪುಣ್ಯ, ಮೇರೆ ಇಲ್ಲದ ಕವಿತಾ ಸಾಮರ್ಥ್ಯ ಅತ್ಯುನ್ನತಮಟ್ಟದ ಕ್ರಿಯಾಶಕ್ತಿ ಹೊಂದಿದ್ದ ಇವರು, ಅದ್ವೈತಕ್ಕೆ ಅಪ್ಪಯ್ಯ ದೀಕ್ಷಿತರಂತೆ, ದ್ವೈತಕ್ಕೆ ಜಯತೀರ್ಥರಂತೆ, ನಮ್ಮ ವಿಶಿಷ್ಟಾದ್ವೈತದ ಪರಿಷ್ಕರಣ, ಮತ್ತು ಶ್ರೀವೈಷ್ಣವ ಪಂಥದ, ವಿಶದೀಕರಣ, ವಿವರಣ, ಸಂರಕ್ಷಣ, ನಿರೂಪಣಗಳನ್ನು ಮಾಡಿ ಅಮೋಘವಾದ ಸೇವೆಯನ್ನು ಸಲ್ಲಿಸಿದ್ದಾರೆ.

ಏಕನಿಷ್ಠೆಯಿಂದ ಶ್ರೀಲಕ್ಷ್ಮೀಹಯಗ್ರೀವ ಸ್ವಾಮಿಯನ್ನು ಆಶ್ರಯಿಸಿ, ಆತನ ದಿವ್ಯ ಕಟಾಕ್ಷಕ್ಕೆ ಪಾತ್ರರಾಗಿ, ನೂರಾರು ಗ್ರಂಥ, ಸೂಕ್ತಿ, ಸ್ತೋತ್ರಗಳನ್ನು ಎಲ್ಲ ಕಾಲದ ಎಲ್ಲ ಜನರಿಗಾಗಿ ರಚಿಸಿದ್ದಾರೆ. ಜನತೆಯ ಸೇವೆಗಾಗಿ ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟು, ಭಕ್ತಿ-ಪ್ರಪತ್ತಿ ಮಾರ್ಗದಿಂದ ಹೆಚ್ಚು ಜನರು ಕೃತಾರ್ಥರಾಗುವಂತೆ ಮಾಡಿ, ಸ್ವಾನುಷ್ಠಾನ ಪೂರ್ವಕ ತೋರಿಸಿಕೊಟ್ಟಿದ್ದಾರೆ. ಶ್ರೀ ರಾಮಾನುಜರು ಉಪದೇಶಿಸಿದ ಪ್ರಪತ್ತಿಶಾಸ್ತ್ರ ಅಥವಾ ಶರಣಾಗತಿಸಿದ್ಧಾಂತವನ್ನು ಆ ಸಂಪ್ರದಾಯ ಹಾಗೂ ಅನುಯಾಯಿಗಳಿಗೆಲ್ಲ ಮನದಟ್ಟಾಗುವಂತೆ ಸಮರ್ಥನ ಮತ್ತು ಪ್ರತಿಪಾದನ ಮಾಡುವುದರ ಮೂಲಕ ನಿಗಮಾಂತದೇಶಿಕರು ವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಅತಿಶಯವಾದಂತಹ ಕಾಣಿಕೆಯನ್ನು ಸಲ್ಲಿಸಿದ್ದಾರೆ ಹಾಗೂ ಭಾರತದ ಧಾರ್ಮಿಕ ತತ್ತ್ವಗಳಿಗೆ ಅಮೋಘ ಕೊಡುಗೆಯನ್ನು ನೀಡಿದ್ದಾರೆ.

ರಾಮಾನುಜರ ಕಾಲದಿಂದಲೇ ಬೆಳೆದು ಬಂದ ಸಂಪ್ರದಾಯ ಇಷ್ಟೊಂದಿದೆ. ವೇದಾಂತ ದೇಶಿಕರಂತೆಯೇ ಹತ್ತಾರು ವೇದಾಂತ ಗ್ರಂಥಗಳನ್ನು ಸಂಸ್ಕೃತ ಮತ್ತು ತಮಿಳು ಮಿಶ್ರವಾದ ಮಣಿಪ್ರವಾಳ ಭಾಷೆಯಲ್ಲಿ ಬರೆದು, ಅವರ ಹಿರಿಯ ಸಮಕಾಲೀನರಾಗಿದ್ದ ಪಿಳ್ಳೈಲೋಕಾಚಾರ್ಯರೂ ರಾಮಾನುಜದರ್ಶನದ ಪ್ರಚಾರಕ್ಕೆ ಮಹೋಪಕಾರ ಮಾಡಿದ್ದಾರೆ.

ಈ ವೇಳೆಗೆ ಮತದಲ್ಲಿ, ಶಾಸ್ತ್ರ ವ್ಯಾಸಂಗದ ಬಗ್ಗೆ ಹಿರಿಯ ಆಚಾರ್ಯರುಗಳಲ್ಲಿ ಭೇದ-ಭಿನ್ನತೆಗಳು ಹೆಚ್ಚಾದುವು. ಇದರ ಫಲವಾಗಿ ಸಂಸ್ಕೃತ ವೇದಗಳಿಗೆ ಪ್ರಾಮುಖ್ಯ ನೀಡಿದ ವಡಗಲೈ, ಆಳ್ವಾರರುಗಳ ತಮಿಳು ಪ್ರಬಂಧಕ್ಕೆ ಪ್ರಾಮುಖ್ಯ ಕೊಟ್ಟ ತೆಂಗಲೈ ಎಂದು ಎರಡು ಸಂಪ್ರದಾಯಗಳು ಹುಟ್ಟಿದುವು. ಆಳ್ವಾರರುಗಳು ನಿರೂಪಿಸಿದ ಪ್ರಪತ್ತಿ, ಕರ್ಮಸಿದ್ಧಾಂತ, ಮುಕ್ತಿಯ ನಂತರ ಜೀವಾತ್ಮರುಗಳ ಸ್ಥಾನ ಮುಂತಾದ ಹದಿನೆಂಟು ಅಂಶಗಳ ಬಗ್ಗೆ ಉಂಟಾದ ಮೂಲಭೂತ ವ್ಯತ್ಯಾಸವೇ ಶ್ರೀವೈಷ್ಣವ ಪಂಥವು ಈ ರೀತಿ ಕವಲೊಡೆಯಲು ಕಾರಣವಾಯಿತೆನ್ನಬಹುದು. ಮರ್ಕಟ ಕಿಶೋರನ್ಯಾಯ ಅಂದರೆ ಕರ್ತವ್ಯನಿರ್ವಹಣೆಯಿಂದ ಪ್ರಪತ್ತಿ ಪಡೆಯುವುದು

ರಾತ್ರಿಸ್ತದವ ಲುಂಪತು, ಯತ್ಕಿಂಚ ದುರಿತಂ ಮಯಿ, ಇದಮಹಂ ಮಾಮ-
ಮೃತಯೋನೌ, ಸೂರ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ ||

b) **ಮಾಧ್ಯಾಹ್ನಿಕ :** ಆ ಪಃ ಪು ನಂ ತು ಪೃಥಿವೀಂ ಪೃಥಿವೀ ಪೂತಾ ಪುನಾತು ಮಾಂ, ಪುನಂತು ಬ್ರಹ್ಮಣಸ್ಪತಿರ್ಬ್ರಹ್ಮಪೂತಾ ಪುನಾತು ಮಾಂ, ಯದುಚ್ಛಿಷ್ಟಮಭೋಜ್ಯಂ ಯದ್ವಾ ದುಶ್ಚರಿತಂ ಮಮ, ಸರ್ವಂ ಪುನಂತು ಮಾಮಾಪೋ ಸತಾಂ ಚ ಪ್ರತಿಗ್ರಹಗ್ಂ ಸ್ವಾಹಾ ||

c) **ಸಾಯಂ ಸಂ ಧ್ಯೆ ಯ ಲ್ಲಿ :** ಅಗ್ನಿಶ್ಚ ಮಾಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ, ಪಾಪೇಭ್ಯೋ ರಕ್ಷಂತಾಂ, ಯದಹ್ನಾ ಪಾಪಮಕಾರ್ಷಂ, ಮನಸಾ ವಾಚಾ ಹಸ್ತಾಭ್ಯಾಂ, ಪ ದ್ಭ್ಯಾ ಮು ದ ರೇ ಣ ಶಿ ಶ್ನಾ, **ಅಹಸ್ತ**ದವ ಲುಂಪತು, ಯತ್ಕಿಂಚದುರಿತಂ ಮಯಿ, ಇದಮಹಂ ಮಾಮಮೃತ-ಯೋನೌ, ಸತ್ಯೇಜ್ಯೋತಿಷಿ ಜುಹೋಮಿ ಸ್ವಾಹಾ ||

8. **ಆಚಮನಂ :**

9. **ಪುನರ್ಮಾರ್ಜನ:-**

ದಧಿಕ್ರಾವ್ಣೋ ಅಕಾರಿಷಂ, ಜಿಷ್ಣೋರಶ್ವಸ್ಯವಾಜಿನ:,
ಸುರಭಿನೋ ಮುಖಾಕರತ್, ಪ್ರಣ ಆಯೂಗ್ಂಷಿ ತಾರಿಷತ್ ||

ಓಂ ಆಪೋಹಿಷ್ಠಾ ಮಯೋಭುವ:, ತಾನ ಊರ್ಜೇ ದಧಾತನ, ಮಹೇರಣಾಯ ಚಕ್ಷಸೇ, ಯೋವಶ್ಶಿವತಮೋ ರಸ:, ತಸ್ಯ ಭಾಜಯತೇ ಹನ:, ಉಶತೀರಿವ ಮಾತರ:, ತಸ್ಮಾ ಅರಂಗಮಾಮವ:, ಯಸ್ಯಕ್ಷಯಾಯ ಜಿನ್ವಥ, ಆಪೋಜನಯಥಾಚನ:, ಓಂಭೂರ್ಭುವಸ್ಸುವ: ||

10. **ಪ್ರಾಣಾಯಾಮ :**

11. **ಸಂಕಲ್ಪ :** ಅರ್ಘ್ಯ ಪ್ರದಾನಂ ಕರಿಷ್ಯೇ ||

12. **ಅರ್ಘ್ಯಪ್ರದಾನಂ :** ಓಂಭೂರ್ಭುವಸ್ಸುವ:, ತತ್ಸವಿತುರ್ವರೇಣ್ಯಂ, ಭರ್ಗೋದೇವಸ್ಯ ಧೀಮಹಿ, ಧಿ ಯೋ ಯೋ ನ: ಪ್ರಚೋದಯಾತ್, ಅಸಾವಾದಿತ್ಯೋ ಬ್ರಹ್ಮ ||

a) **ಪುನಃ ಪ್ರಾಣಾಯಾಮ :**

ಶ್ರೀ ಭಗವದಾಜ್ಞಯಾ ಶ್ರೀಮನ್ನಾರಾಯಣ ಪ್ರೀತ್ಯರ್ಥಂ (ಮಮ ಉಪಾತ್ತಸ್ಸಮಸ್ತ ದುರಿತಕ್ಷಯದ್ವಾರಾ) ಪ್ರಾತಃ | ಮಾಧ್ಯಾಹ್ನಿಕ | ಸಾಯಂ|

ಸಂಧ್ಯಾಕಾಲಾತೀತದೋಷಪ್ರಾಯಶ್ಚಿತ್ತಾರ್ಥಂ ಪುನರರ್ಘ್ಯಪ್ರದಾನಂ ಕರಿಷ್ಯೇ ||

13. ಆಚಮನಂ :–

14. ತರ್ಪಣಂ :–

ಓಂ ಕೇಶವಂ ತರ್ಪಯಾಮಿ, ನಾರಾಯಣಂ ತರ್ಪಯಾಮಿ, ಮಾಧವಂ ತರ್ಪಯಾಮಿ, ಗೋವಿಂದಂ ತರ್ಪಯಾಮಿ, ವಿಷ್ಣುಂ ತರ್ಪಯಾಮಿ, ಮಧುಸೂಧನಂ ತರ್ಪಯಾಮಿ, ತ್ರಿವಿಕ್ರಮಂ ತರ್ಪಯಾಮಿ, ವಾಮನಂ ತರ್ಪಯಾಮಿ, ಶ್ರೀಧರಂ ತರ್ಪಯಾಮಿ, ಹೃಷೀಕೇಶಂ ತರ್ಪಯಾಮಿ, ಪದ್ಮನಾಭಂ ತರ್ಪಯಾಮಿ, ದಾಮೋದರಂ ತರ್ಪಯಾಮಿ, (ಶ್ರೀ ವಾಸುದೇವಂ ತರ್ಪಯಾಮಿ.)

15. ಆಚಮನಂ :

16. ಜಪ :–

ಆಸನಮಂತ್ರಸ್ಯ ಪೃಥಿವ್ಯಾ ಮೇರುಪೃಷ್ಠಋಷಿಃ, ಸುತಲಂ ಛಂದಃ, ಶ್ರೀ ಕೂರ್ಮೋ ದೇವತಾ, ಕೂರ್ಮಾಸನೇ ವಿನಿಯೋಗಃ, ಓಂ ಕೂರ್ಮಾಸನಾಯ ನಮಃ, " ಪೃಥ್ವಿ ತ್ವಯಾ ಧೃತಾ ಲೋಕಾಃ ದೇವಿ ತ್ವಂ ವಿಷ್ಣುನಾ ಧೃತಾ, ತ್ವಂ ಚ ಧಾರಯ ಮಾಂ ದೇವಿ ಪವಿತ್ರಂ ಕುರು ಚಾಸನಂ. "

17. ಪ್ರಾಣಾಯಾಮ್ಯ :

ಶ್ರೀ ಭಗವದಾಜ್ಞಯಾ ಶ್ರೀಮನ್ನಾರಾಯಣ ಪ್ರೀತ್ಯರ್ಥಂ ದಶಪ್ರಾಣಾಯಾಮ ಮಂತ್ರಜಪಂ ಕರಿಷ್ಯೇ ||

18. ಧ್ಯಾನಂ :

ಅರ್ಕಮಂಡಲಮಧ್ಯಸ್ಥಂ ಸೂರ್ಯಕೋಟಿಸಮಪ್ರಭಂ
ಬ್ರಹ್ಮಾದಿಸೇವ್ಯಪಾದಾಬ್ಜಂ ನೌಮಿ ಬ್ರಹ್ಮರಮಾಸಖಂ ||

19. ಪ್ರಾಣಾಯಾಮ್ಯ :

20. ಸಂಕಲ್ಪ್ಯ :

ಶ್ರೀಭಗವದಾಜ್ಞಯಾ, ಶ್ರೀ ಭಗವತ್ಕೈಂಕರ್ಯರೂಪಂ, ಶ್ರೀಮನ್ನಾರಾಯಣ ಪ್ರೀತ್ಯರ್ಥಂ ಪ್ರಾತಃ | ಮಾಧ್ಯಾಹ್ನಿಕ | ಸಾಯಂ ಸಂಧ್ಯಾ ಗಾಯತ್ರೀಮಂತ್ರಜಪಂ ಕರಿಷ್ಯೇ.

" ಆಯಾತು ವರದಾ ದೇವೀ ಅಕ್ಷರಂ ಬ್ರಹ್ಮಸಂಹಿತಂ |

ಗಾಯತ್ರೀಂ ಛಂದಸಾಂ ಮಾತೇದಂ ಬ್ರಹ್ಮ ಜುಷಸ್ವ ನಃ ||

[illegible]ಜೋಽಸಿ ಸಹೋಽಸಿ ಬಲಮಸಿ ಭ್ರಾಜೋಽಸಿ ದೇವಾನಾಂ ಧಾಮನಾಮಾಸಿ [illegible] ವಿಶ್ವಾಯುಃ ಸರ್ವಮಸಿ ಸರ್ವಾಯುಃ, ಅಭಿಭೂರೋಂ ಗಾಯತ್ರೀಂ [illegible] ಸಾವಿತ್ರೀಂ ಆವಾಹಯಾಮಿ, ಸರಸ್ವತೀಂ ಆವಾಹಯಾಮಿ, [illegible]ಋಷಿಃ, ವಿಶ್ವಾಮಿತ್ರಃ ದೇವೀ ಗಾಯತ್ರೀ ಛಂದಃ ಪರಮಾತ್ಮಾ [illegible] ಶ್ರೀಮನ್ನಾರಾಯಣಪ್ರೀತ್ಯರ್ಥೇ ಗಾಯತ್ರೀಮಂತ್ರಜಪೇ [illegible] ||

[illegible]ಕಂ ಧಿಯೋ ಧರ್ಮಾದಿಗೋಚರಾಃ

[illegible] ಯತ್ಪ್ರೇ: ತದ್ವರೇಣ್ಯಮುಪಾಸ್ಮಹೇ "

[illegible] ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ [illegible] ಯೋ ನಃ ಪ್ರಚೋದಯಾತ್ - ಇತಿ ದಶ | ಅಷ್ಟಾವಿಂಶತಿ | [illegible]ಶತ | ಸಂಖ್ಯಯಾ ಜಪಿತ್ವಾ

[illegible] **ಪ್ರಾಣಾಯಾಮ :**

2[illegible] **ಸಂಕಲ್ಪ :** ಶ್ರೀಭಗವದಾಜ್ಞಯಾ ಶ್ರೀಮನ್ನಾರಾಯಣ ಪ್ರೀತ್ಯರ್ಥಂ ಪ್ರಾತಃ | ಮಾಧ್ಯಾಹ್ನಿಕ | ಸಾಯಂ ಸಂಧ್ಯೋಪಸ್ಥಾನಂ ಕರಿಷ್ಯೇ

[illegible] **ಉಪಸ್ಥಾನಂ :**

ಉತ್ತಮೇ ಶಿಖರೇ ದೇವಿ ಭೂಮ್ಯಾಂ ಪರ್ವತಮೂರ್ಧನಿ

ಬ್ರಾಹ್ಮಣೇಭ್ಯೋ ಹ್ಯನುಜ್ಞಾನಂ ಗಚ್ಛ ದೇವಿ ಯಥಾ ಸುಖಂ ||

